ಕರ್ನಾಟಕ ಸರ್ಕಾರ – ಸಾರ್ವಜನಿಕ ಶಿಕ್ಷಣ ಇಲಾಖೆ

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.**

**ಸಂಶೋಧನೆ ಮೌಲ್ಯಮಾಪನ ನಿರ್ವಹಣೆ ಮೇಲುಸ್ತುವಾರಿ ಮಧ್ಯವರ್ತನದಡಿಯಲ್ಲಿ**

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

# ಶಿವಮೊಗ್ಗ ತಾ|| ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ಆಯ್ದ ಸರ್ಕಾರಿ ಶಾಲೆಗಳಲ್ಲಿ ಬಹು ತರಗತಿಗಳ ನಿರ್ವಹಣಾ ಕೌಶಲಗಳ ಅಧ್ಯಯನ.


ಸಂಶೋಧಕರು :

ಶ್ರೀಮತಿ ಕೆ. ವನಮಾಲ
ಉಪನ್ಯಾಸಕರು ಡಯಟ್
ಶಿವಮೊಗ್ಗ.

# ಪರಿವಿಡಿ


| ಕ್ರಮಸಂಖ್ಯೆ | ವಿವರ | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ/ ಉದ್ದೇಶಗಳು | 1 |
| 2 | ಅಧ್ಯಯನದ ಕಾರ್ಯಯೋಜನೆ /ನೈಜ ಆಯವ್ಯಯ | 2-3 |
| 3 | ಬಹುಮುಖಿ-1 ತರಬೇತಿ | 1-6 |
| 4 | ಬಹುದರ್ಶಿನಿ ಜಿಲ್ಲೆಯ ಆಯ್ದ ಸರ್ಕಾರಿ ಶಾಲೆಗಳ ಬಹು ತರಗತಿ ನಿರ್ವಹಣಾ ಕೌಶಲಗಳ ವೀಡಿಯೋ ಚಿತ್ರೀಕರಣ. | 1-18 |
| 5 | ಬಹುತರಗತಿ ನಿರ್ವಹಣಾ ಕೌಶಲಗಳ ಮುಖಾಮುಖಿ ಕಾರ್ಯಾಗಾರ : | 1-10 |
| 6 | ಶಾಲಾ ಶೈಕ್ಷಣಿಕ ಮಾರ್ಗದರ್ಶನ ಸೂ ಚಿ. | 1-9 |
| 7 | ಸಾಫಲ್ಯ ಪರೀಕ್ಷೆ | 1-10 |
| 8 | ಬಹುದರ್ಶಿನಿ ವೀಡೀಯೋ ಸಾಕ್ಷ್ಯಚಿತ್ರದ 90 ನಿಮಿಷ ಹಾಗೂ 30 ನಿಮಿಷದ ಸಿಡಿಗಳು | |
| 9 | ಮುಖಾ ಮುಖಿ ತರಬೇತಿ ಕಾರ್ಯಾಗಾರ 30 ನಿಮಿಷದ ವೀಡೀಯೋ ಸಿಡಿಗಳು | |
| 10 | ಅನುಬಂಧಗಳು | |
| 11 | ಗ್ರಂಥಋಣ<br>ಬಹುಮುಖಿ-1 ತರಬೇತಿ ಸಾಹಿತ್ಯ. ಡಿಎಸ್ ಇ ಆರ್ ಟಿ<br>ಬಹುಮುಖಿ-2 ತರಬೇತಿ ಸಾಹಿತ್ಯ. ಡಿಎಸ್ ಇ ಆರ್ ಟಿ<br>ಪ್ರಾಥಮಿಕ ಶಿಕ್ಷಣದಲ್ಲಿ ಬಹುವರ್ಗ ಬೋಧನೆ | |

# ಪೀಠಿಕೆ :

ಬಹುತರಗತಿ ನಿರ್ವಹಣಾ ಕೌಶಲಗಳ ಅಧ್ಯಯನವು ಐದು ಹಂತಗಳಲ್ಲಿ ಸಾಗುತ್ತಿದ್ದು. ತರಬೇತಿಯ ಅನುಷ್ಠಾನವನ್ನು ಮೌಲ್ಯ ಮಾಪನ ಮಾಡುವುದರಿಂದ ಆರಂಭಿಸಿಕೊಂಡು, ಅಲ್ಲಿ ಗುರುತಿಸಲಾದ ತೊಡಕುಗಳನ್ನು ನಿವಾರಿಸುವ ಪ್ರಯತ್ನವಾಗಿ ತರಬೇತಿ ಸಾಹಿತ್ಯ, ತರಗತಿ ನೈಜ ಸನ್ನಿವೇಶವನ್ನು ದೃಶ್ಯ ಮಾಧ್ಯಮದಲ್ಲಿ ಸೆರೆ ಹಿಡಿದು ಅಧ್ಯಯನಕ್ಕೆ ಒಳಪಟ್ಟ ಶಿಕ್ಷಕರೊಂದಿಗೆ ಸಂವಾದ ಏರ್ಪಡಿಸುವ ಮುಖಾಮುಖಿ ತರಬೇತಿಯನ್ನು ನೀಡಲಾಗಿದೆ ಆ ಶಿಕ್ಷಕರು ನೈಜ ಕಾರ್ಯ ಕ್ಷೇತ್ರದಲ್ಲಿ ಕಾಲಿಕ ಮಾರ್ಗದರ್ಶನ ನೀಡಲಾಗುವುದು ನಂತರ ಇವುಗಳನ್ನು ಮೌಲ್ಯ ಮಾಪನ ಮಾಡುವುದರೊಂದಿಗೆ ಅಧ್ಯಯನವು ಅಂತ್ಯವಾಗುತ್ತದೆ.

# ಉದ್ದೇಶಗಳು :

## ಅಧ್ಯಯನಕ್ಕೆ ಒಳಪಟ್ಟ ಸರ್ಕಾರಿ ಶಾಲೆಗಳಲ್ಲಿ

1. ಬಹುಮುಖ -1 ತರಬೇತಿ ಅನುಷ್ಠಾನ ಮೌಲ್ಯಮಾಪನ ಮಾಡುವುದು

2. ಮೌಲ್ಯಮಾಪನದಲ್ಲಿ ಗುರುತಿಸಿದ ತೊಡಕುಗಳನ್ನು ನಿವಾರಿಸಲು ಸಂಪನ್ಮೂಲ ಸಾಮಗ್ರಿಯನ್ನು ತಯಾರಿಸುವುದು.
   ಎ) ಸಂಪನ್ಮೂಲ ಸಾಮಗ್ರಿ ಸಾಹಿತ್ಯ ರೂಪದಲ್ಲಿ
   ಬಿ) ತರಗತಿಯ ನೈಜ ಸನ್ನಿವೇಶವನ್ನು ದೃಶ್ಯ ಮಾಧ್ಯಮದಲ್ಲಿ ಸೆರೆ ಹಿಡಿಯುವುದು.

3. 'ಮುಖಾಮುಖಿ' ಅಧ್ಯಯನಕ್ಕೆ ಒಳಪಟ್ಟ ಶಿಕ್ಷಕರುಗಳಿಗೆ ತರಬೇತಿ ನೀಡಿ ತೊಡಕುಗಳನ್ನು ನಿವಾರಿಸುವುದು
   (ಬಹುಮುಖಿ -2 ತರಬೇತಿಯನ್ನು ಬಿ.ಆರ್.ಸಿ. ಶಿವಮೊಗ್ಗ ಇವರ ಸಹಯೋಗದಿಂದ ನೀಡುವುದು) ಒಳಗೊಂಡಿರುತ್ತದೆ.

4 .ಜೂನ್ ತಿಂಗಳಿನಿಂದಾರಂಭಿಸಿ ಫೆಬ್ರವರಿವರೆಗೆ ಕಾಲಿಕ ಮಾರ್ಗದರ್ಶನ ಹಾಗೂ ಮೇಲುಸ್ತುವಾರಿ ನೀಡುವುದು.

4. ಸಾಪಲ್ಯ ಪರೀಕ್ಷೆ ಬಹುಮುಖಿ - 2 ಹಾಗೂ ಮುಖಾಮುಖಿ ತರಬೇತಿ ಅನುಷ್ಠಾನ ಮೌಲ್ಯಮಾಪನ ಮಾಡುವುದು.

5.

**ಅಧ್ಯಯನ ಫಲ** : Expected study out comes in the Terms of Teacher's behavioural change

ಬಹುತರಗತಿಗಳ ನಿರ್ವಹಿಸುತ್ತಿರುವ ಶಿಕ್ಷಕರು ಶಿಕ್ಷಕರ,ಮಕ್ಕಳ ಸಂಖ್ಯೆಯನ್ನಾಧರಿಸಿ ಶಾಲಾ ಯೋಜನೆಯನ್ನು ತಯಾರಿಸುವರು.

1. ಶಾಲಾ ಯೋಜನೆಗೆ ತಕ್ಕಂತೆ
   - ಕಲಿಕೆ ಚಟುವಟಿಕೆಗಳು,
   - ಕಲಿಕೆ ಹಾಗೂ ಬೋಧನೋಪಕರಣಗಳು,
   - ಮೌಲ್ಯಮಾಪನ ತಂತ್ರಗಳನ್ನು ರೂಪಿಸಿ ತರಗತಿಯಲ್ಲಿ ಅಳವಡಿಸುವರು.

3 ಬಹುತರಗತಿಗಳ ನಿರ್ವಹಣೆ ಹೊರೆ ಎಂಬ ಭಾವನೆಯನ್ನು ತೊರೆಯುವಬಹುತರಗತಿಗಳ ನಿರ್ವಹಣೆ ಕೌಶಲವನ್ನು ಮೈಗೂಡಿಸಿಕೊಳ್ಳುವರು.

# 1. ಸಂಶೋಧನೆ ಕ್ರಿಯಾ ಯೋಜನೆಯ ಪ್ರಸ್ಥಾವನೆ :

## ಪ್ರಾಯೋಗಿಕ ಅಧ್ಯಯನ :

**ಶೀರ್ಷಿಕೆ : ಚಿಲಕಾದ್ರಿಹಳ್ಳಿ ಕ್ಲಸ್ಟರ್ ಆಯ್ದ ಸರ್ಕಾರಿ ಶಾಲೆಗಳಲ್ಲಿ ಬಹು ತರಗತಿ ನಿರ್ವಹಣಾ ಕೌಶಲ ತಂತ್ರಗಳ ಅಧ್ಯಯನ.**

## ಸಂಶೋಧನೆ ವಿಶೇಷತೆ :

ಸಂಶೋಧನೆಯು ಆಯ್ದು ಶಾಲೆಯ ಎಲ್ಲಾ ಶಿಕ್ಷಕರನ್ನು ಶಿಬಿರಾರ್ಥಿಗಳೆಂದು ಪರಿಗಣಿಸಲಾಗುವುದು, ಅವರನ್ನು ಕಾರ್ಯಕ್ಷೇತ್ರದಲ್ಲಿ ಮೌಲ್ಯ ಮಾಪನ ಮಾಡಿ, ದತ್ತಾಂಶವನ್ನಾಧರಿಸಿ ಶಿಕ್ಷಕರಿಗೆ 5 ದಿನಗಳ ಪ್ರಾಯೋಗಿಕ ತರಬೇತಿಯನ್ನು ಎಪ್ರಿಲ್ ರಜಾ ದಿನಗಳಲ್ಲಿ ನೀಡಲಾಗುವುದು. ತರಬೇತಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದ ವಾರ್ಷಿಕ ಕ್ರಿಯಾ ಯೋಜನೆ ಸೇರಿದಂತೆ ಪೂರ್ಣ ತಯಾರಿಗೊಳಿಸುವುದು.

ಜೂನ್ ಶಾಲಾ ಆರಂಭದೊಂದಿಗೆ ಶಾಲೆಗಳಲ್ಲಿ ಯೋಜನೆ ಅನುಷ್ಠಾನವಾಗುತ್ತದೆ. ನಿರಂತರ ಮಾರ್ಗದರ್ಶನ ನೀಡಿ ಮಕ್ಕಳಲ್ಲಿ ಕಲಿಕಾ ಸಮಯ ಹೆಚ್ಚಿಸಿ, ಗುಣಾತ್ಮಕ ಕಲಿಕೆಯೆಡೆ ಸಾಗಲು ಮಾರ್ಗದರ್ಶನ ನೀಡುವುದು

1) ತರಬೇತಿ ಪೂರ್ವ ಶಾಲಾ ಭೇಟಿ ಹಾಗೂ ಮೌಲ್ಯಮಾಪನ ಮಾಡಿ ತರಬೇತಿ ಅವಶ್ಯಕತೆಗಳನ್ನು ಗುರುತಿಸುವುದು. (ಸಹಾಯ ಪ್ರಶ್ನಾವಳಿ ಸಂದರ್ಶನ ಕೈಪಿಡಿ)

2) ಜಿಲ್ಲಾ ಆಯ್ದ ಮಾದರಿ ಶಾಲೆಗಳ ಬಹುತರಗತಿಗಳ ನಿರ್ವಹಣಾ ತಂತ್ರ ವಿಧಾನಗಳ ವೀಡಿಯೋ ಸಾಕ್ಷಚಿತ್ರ ಬಳಕೆ.

3) 3 ದಿನಗಳ ಬಹುಮುಖಿ-2 ತರಬೇತಿ ನೀಡಿ, 2 ದಿನಗಳ ಬಹುತರಗತಿ ನಿರ್ವಹಣಾ ಕೌಶಲ ತರಬೇತಿ ನೀಡಿಕೆ.

## ಆರ್‌ಇಎಂಎಸ್ [ಪಿಎಸ್ ಟಿ ಇ ಮೌಲ್ಯಮಾಪನ ಅಧ್ಯಯನ ಅಡಿಯಲ್ಲಿ]

**ಸಮಸ್ಯೆ ನಿರೂಪಣೆ** :

ಪ್ರಸ್ತುತ ಬಹುವರ್ಗ ಬೋಧನೆಯಲ್ಲಿ ತರಗತಿ ನಿರ್ವಹಿಸುತ್ತರುವ, ಶಾಲೆಯ ಶಿಕ್ಷಕರಿಗೆ, ವಿಭಿನ್ನ ವಿಧಾನ/ ತಂತ್ರಗಳ ಸಂಪನ್ಮೂಲ ಬೆಂಬಲ, ನೀಡಿ ಮಕ್ಕಳ ಕಲಿಕಾ ಸಮಯ ಹೆಚ್ಚಿಸುವುದರೊಂದಿಗೆ ಕಲಿಕೆಯನ್ನು ಪರಿಣಾಮಕಾರಿಯನ್ನಾಗಿಸಬಹುದು.

**ಸಂಶೋಧನೆಯ ಅಗತ್ಯತೆ** :

ತರಗತಿಗೆ ಒಬ್ಬರು ಶಿಕ್ಷಕರು ಎಂಬಂತೆ ಪಠ್ಯ ಪುಸ್ತಕ, ಸೇವಾ ಪೂರ್ವಶಿಕ್ಷಕರ ಶಿಕ್ಷಣ ವ್ಯವಸ್ಥೆಯಿದ್ದು. ಸೇವಾವಧಿಯಲ್ಲಿ ಒಂದಕ್ಕಿಂತ ಹೆಚ್ಚು ತರಗತಿ ನಿರ್ವಹಿಸಬೇಕಾದ ಅನಿವಾರ್ಯತೆ ಇದೆ. ಈ ಸವಾಲನ್ನು ಸಮರ್ಥವಾಗಿ ಎದುರಿಸಲು ಶಿಕ್ಷಕರನ್ನು ಬಹುಮುಖಿ-1 ಹಾಗೂ ಬಿಆರ್ ಪಿ/ಸಿಆರ್ ಪಿಗಳಿಗೆ ಬಹುಮುಖಿ-2 ತರಬೇತಿಯನ್ನು ನೀಡಲಾಗಿದೆ. ಪ್ರಸ್ತುತ ಕೆಎಸ್ ಕ್ಯೂಎಓ ಫಲಿತಾಂಶವನ್ನಾಧರಿಸಿದ ಕಿ.ಪ್ರಾ.ಶಾಲೆಗಳ ಕ್ರಿಯಾ ಯೋಜನೆಗಳಲ್ಲಿನ  ಸಂಭವನೀಯ ಕಾರಣಗಳು ಬಹುವರ್ಗ ಬೋಧನೆಯಲ್ಲಿರುವ ಸವಾಲುಗಳನ್ನು ಪಟ್ಟಿ ಮಾಡಿವೆ. ಸದರಿ ಕಿ.ಪ್ರಾ.ಶಾಲೆಯ ಶಿಕ್ಷಕರಿಗೆ, ವಿಭಿನ್ನ ವಿಧಾನ/ ತಂತ್ರಗಳ ಸಂಪನ್ಮೂಲ ಬೆಂಬಲ, ನೀಡಿ ಮಕ್ಕಳ ಕಲಿಕಾ ಸಮಯ ಹೆಚ್ಚಿಸುವುದರೊಂದಿಗೆ, ಕಲಿಕೆಯನ್ನು ಪರಿಣಾಮಕಾರಿಯನ್ನಾಗಿಸಬಹುದು, ಎನ್ನುವ ಪ್ರಾಯೋಗಿಕ ಅಧ್ಯಯನವು ಶೈಕ್ಷಣಿಕ ಸಂಶೋಧನೆ ಹಾಗೂ ಮಾರ್ಗದರ್ಶನ ನೀಡುವಲ್ಲಿನ ತುರ್ತು ಅಗತ್ಯವಾಗಿದೆ.

# ಸಂಶೋಧನ ವಿನ್ಯಾಸ:

**ಪ್ರತಿದರ್ಶಚಯನ** : ಚಿಲಕಾದ್ರಿಹಳ್ಳಿ ಕ್ಲಸ್ಟರ್ ಆಯ್ದ ಬಹುತರಗತಿಗಳ ನಿರ್ವಹಿಸುತ್ತಿರುವ ಸರ್ಕಾರಿ ಶಾಲೆಗಳ ಶಿಕ್ಷಕರು

**ಸಾಧನ/ತಂತ್ರಗಳು** :

**ಪ್ರಥಮ** ತೈ ಮಾಸಿಕ ಅವಧಿಯ ಆಯ್ದ ಸಾಮರ್ಥ್ಯಗಳಿಗೆ ಶಾಲೆಯ ಸ್ವರೂಪ ಶಿಕ್ಷಕರ ಸಂಖ್ಯೆಯನ್ನಾಧರಿಸಿ ಮಾದರಿ ತರಗತಿ ಹೊಂದಾಣಿಕೆ,ಸಾಮರ್ಥ್ಯ ಆಧರಿತ ಚಟುವಟಿಕೆ ರೂಪಿಸುವಿಕೆ ಹಾಗೂ ರಂಗಕಲಿ ಅಳವಡಿಕೆ, ಸ್ಥಳ ನಿರ್ವಹಣೆ, ಗುಂಪು ರಚನೆ, ಹಿರೇಮಣಿ ನಿರ್ವಹಣೆ, ಬೋಧನೋಪಕರಣ ಮಕ್ಕಳ ಕಲಿಕೋಪಕರಣ ನಿರ್ವಹಣೆ [ಟಿಎಲ್ಎಂ]', ಮೌಲ್ಯಮಾಪನ, ಗ್ರಂಥಾಲಯ ಬಳಕೆ

# ಹಂತ 1 - ತರಬೇತಿ

## ಅಧ್ಯಯನದ ಉದ್ದೇಶಗಳು :

1. ಬಹು ತರಗತಿ ನಿರ್ವಹಿಸುತ್ತಿರುವ ಶಿಕ್ಷಕರ ಹಾಗೂ ಶಾಲೆಯ ಅಗತ್ಯತೆಯನ್ನು ಪಟ್ಟಿ ಮಾಡುವುದು.

2. ಬಹುಮುಖಿ -1 ತರಬೇತಿಯ ಇತಿಮಿತಿಯನ್ನು ಗುರುತಿಸುವುದು.

3. ಬಹುಮುಖಿ -1 ತರಬೇತಿ ನಂತರದ ಅನುಪಾಲನೆಯನ್ನು ವಿಶ್ಲೇಷಿಸುವುದು.

4. ದತ್ತಾಂಶವನ್ನು ಆಧರಿಸಿದ ಕಾರ್ಯಯೋಜನೆಯನ್ನು ರೂಪಿಸಿ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

## ಅಧ್ಯಯನದ ವೈಶಿಷ್ಟ್ಯಗಳು :

ಈ ಅಧ್ಯಯನವು ಕೇವಲ ತರಬೇತಿ ಅನುಷ್ಠಾನದ ಮೌಲ್ಯಮಾಪನವಾಗಿರದೇ, ಅಧ್ಯಯನದಲ್ಲಿ ಗುರುತಿಸಿದ ತೊಡಕುಗಳನ್ನು ನಿವಾರಿಸಲು ಕಾರ್ಯಯೋಜನೆಯನ್ನು ರೂಪಿಸಿ ಸಂಬಂಧಿಸಿದ ಕ್ಲಸ್ಟರ್‌ನ ಶಿಕ್ಷಕರಿಗೆ ಮಾರ್ಗದರ್ಶನ ನೀಡಲಾಗುವುದು. ಇದಕ್ಕಾಗಿ 2 ದಿನಗಳ ಬಹುತರಗತಿ ನಿರ್ವಹಣಾ ಕೌಶಲಗಳ ಮುಖಾಮುಖಿ ಕಾರ್ಯಗಾರವನ್ನು ಆರ್.ಇ.ಎಂ.ಎಸ್. ಅಡಿಯಲ್ಲಿ ಹಮ್ಮಿಕೊಳ್ಳಲು ಯೋಜಿಸಲಾಗಿದೆ.

## ಅಧ್ಯಯನದ ವಿನ್ಯಾಸ :

ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಶಾಲೆಗಳನ್ನು ಹೊಂದಿರುವ ಚಿಲಕಾದ್ರಿ ಹಳ್ಳಿ ಕ್ಲಸ್ಟರ್‌ನ್ನು ಗುರುತಿಸಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಬಹುಮುಖಿ -1 ತರಬೇತಿ ಅನುಷ್ಠಾನ ಮೌಲ್ಯಮಾಪನ ಮಾಡಬಹುದಾದ ಅಗತ್ಯ ಅಂಶಗಳನ್ನು ಗುರುತಿಸಲು ಹಾಗೂ ಅಧ್ಯಯನದ ರೂಪುರೇಷವನ್ನು ಒಂದು ಜಿಲ್ಲಾ ಮಟ್ಟದ ತಜ್ಞರ ತಂಡದಲ್ಲಿ ನಿರ್ಧರಿಸಲಾಯಿತು. ಈ ಕಾರ್ಯವನ್ನು 2005-06ನೇ ಶೈಕ್ಷಣಿಕ ವರ್ಷದಲ್ಲಿ ಮಾಡಿರುವುದರಿಂದ ಈ ಹಿಂದೆ ತಯಾರಾದ ಪ್ರಶ್ನಾವಳಿಯನ್ನೇ ಬಳಸಿಕೊಳ್ಳಲಾಗಿದೆ.

ಕ್ಲಸ್ಟರ್‌ನ ಶಾಲೆಗಳ ಆಯ್ಕೆಗಾಗಿ ಶಿವಮೊಗ್ಗ ತಾಲ್ಲೂಕಿನ ಬಿ.ಆರ್.ಸಿ. ಸಮನ್ವಯಾಧಿಕಾರಿಗಳವರಿಂದ ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಈ ಕ್ಲಸ್ಟರ್‌ನ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ಹಸನ್‌ರವರಿಂದ ಬಹುತರಗತಿ ನಿರ್ವಹಣೆ ಮಾಡುತ್ತಿರುವ ಶಾಲೆಗಳು, ಮಕ್ಕಳ ಸಂಖ್ಯೆ ಹಾಗೂ ಶಿಕ್ಷಕರ ಮಾಹಿತಿಯನ್ನು ಪಡೆಯಲಾಯಿತು.

ದಿನಾಂಕ : 17-03-2007ರ ಚಿಲಕಾದ್ರಿ ಹಳ್ಳಿ ಕ್ಲಸ್ಟರ್‌ನ ಸಮಾಲೋಚನಾ ಸಭೆಯಲ್ಲಿ ಸಂಶೋಧಕರು ಪಾಲ್ಗೊಂಡು ಅಧ್ಯಯನಕ್ಕೆ ಆಯ್ಕೆಯಾದ ಶಾಲೆಗಳ ಶಿಕ್ಷಕರಿಗೆ ಅಧ್ಯಯನದ ಗುರಿ ಉದ್ದೇಶಗಳನ್ನು ತಿಳಿಸಲಾಯಿತು.

ಅಗತ್ಯ ಮಾಹಿತಿ ಸಂಗ್ರಹಣೆಗಾಗಿ ಡಯಟ್ ಉಪನ್ಯಾಸಕರು ಶಾಲೆಗಳಿಗೆ ಭೇಟಿ ಮಾಡಿ ಮಾಹಿತಿ ಪಡೆದರು. ಸಂಶೋಧಕರು ಸದರಿ ಶಾಲೆಗಳಿಗೆ ಭೇಟಿ ನೀಡಿ ಶೈಕ್ಷಣಿಕ ಚಿತ್ರವನ್ನು ಪಡೆದರು.

ಸಂಗ್ರಹಿಸಿದ ದತ್ತಾಂಶಗಳನ್ನು ವಿಶ್ಲೇಷಿಸಿ ಶೈಕ್ಷಣಿಕ ಕ್ರಿಯಾ ಯೋಜನೆಯನ್ನು ರೂಪಿಸಿ ಅಧ್ಯಯನಕ್ಕೆ ಒಳಪಟ್ಟ ಎಲ್ಲಾ ಶಾಲೆಯ ಶಿಕ್ಷಕರಿಗೆ ಬಿ.ಆರ್.ಸಿ. ಶಿವಮೊಗ್ಗ ಇವರ ವತಿಯಿಂದ ಬಹುಮುಖಿ -2 ಹಾಗೂ 2 ದಿನಗಳ ಬಹು ತರಗತಿಗಳ ನಿರ್ವಹಣಾ ಕೌಶಲಗಳ ಮುಖಾಮುಖಿ ಕಾರ್ಯಾಗಾರವನ್ನು ಆರ್.ಇ.ಎಂ.ಎಸ್. ಅಡಿಯಲ್ಲಿ ನೀಡಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ನಾವೀನ್ಯ ದೃಷ್ಟಿಕೋನವನ್ನು ನೀಡಲಾಯಿತು.

## ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ವಿಶೇಷತೆ :

ಶಿವಮೊಗ್ಗ ತಾಲ್ಲೂಕಿನಲ್ಲಿ 14 ಕ್ಲಸ್ಟರ್‌ಗಳಿಗೆ ಚಿಲಕಾದ್ರಿ ಹಳ್ಳಿ ಕ್ಲಸ್ಟರ್ ಇವುಗಳಲ್ಲಿ ಒಂದಾಗಿದೆ. 2005-06ನೇ ಸಾಲಿನಿಂದ ಕೆ.ಆರ್.ಪುರಂ. ಕ್ಲಸ್ಟರ್‌ನಿಂದ ಬೇರ್ಪಟ್ಟು ನಿರ್ಮಾಣವಾದ ಹೊಸ ಕ್ಲಸ್ಟರ್ ಇದಾಗಿದೆ. ಈ ಕ್ಲಸ್ಟರ್ ವ್ಯಾಪ್ತಿಯಲ್ಲಿ ಸಂಸ್ಕೃತ ಗ್ರಾಮವೆಂದು ಪ್ರಖ್ಯಾತಿ ಪಡೆದ ಮತ್ತೂರು ಇದ್ದು, ಅಲ್ಲೂ ಒಂದು ಹಿರಿಯ ಪ್ರಾಥಮಿಕ ಶಾಲೆಯಿದೆ. ಈ ಕ್ಲಸ್ಟರ್‌ನಲ್ಲಿ ನಗರ ಕೇಂದ್ರ, ಹೊರವಲಯ, ಗ್ರಾಮಾಂತರ ಹಾಗೂ ಬಸ್ಸಿನ ಸೌಲಭ್ಯವಿಲ್ಲದ ಗ್ರಾಮಾಂತರ ಶಾಲೆಗಳನ್ನು ಹೊಂದಿದೆ.

ಈ ಕ್ಲಸ್ಟರ್ 23 ಶಾಲೆಗಳ ಸಮೂಹವಾಗಿದ್ದು, 5 ಎಲ್.ಪಿ.ಎಸ್. 12 ಹೆಚ್.ಪಿ.ಎಸ್. 2 ಅನುದಾನಿತ ಖಾಸಗಿ ಶಾಲೆಗಳು, 4 ಪ್ರೌಢಶಾಲೆಗಳನ್ನು ಹೊಂದಿದೆ.

## ನಗರಕೇಂದ್ರದಲ್ಲಿರುವ ಸರ್ಕಾರಿ ಶಾಲೆಗಳು :

1. ಹಿ.ಪ್ರಾ.ಶಾ. ವಿದ್ಯಾನಗರ
2. ಹಿ.ಪ್ರಾ.ಶಾ. ಇಸ್ಲಾಪುರಸ
6. ಕಿ.ಪ್ರಾ.ಶಾ. ಮಲವಗೊಪ್ಪ

## ನಗರಕೇಂದ್ರದಲ್ಲಿರುವ ಖಾಸಗಿ ಶಾಲೆಗಳು :

1. ಹಿ.ಪ್ರಾ.ಶಾ. ಬಾಲಾಜಿ
2. ಹಿ.ಪ್ರಾ.ಶಾ. ತುಂಗಾ ವಿದ್ಯಾಮಂದಿರ

## ನಗರ ಹೊರವಲಯದ ಸರ್ಕಾರಿ ಶಾಲೆಗಳು

1. ಹಿ.ಪ್ರಾ.ಶಾ. ಚಿಲಕಾದ್ರಿ ಹಳ್ಳಿ
2. ಹಿ.ಪ್ರಾ.ಶಾ. ಮಲವಗೊಪ್ಪ
3. ಹಿ.ಪ್ರಾ.ಶಾ. ವಡ್ಡಿನಕೊಪ್ಪ
4. ಹಿ.ಪ್ರಾ.ಶಾ. ಮಳಲೀಕೊಪ್ಪ

## ಗ್ರಾಮಾಂತರ ಶಾಲೆಗಳು :

1. ಹಿ.ಪ್ರಾ.ಶಾ. ಮಂಡೇನಕೊಪ್ಪ
2. ಹಿ.ಪ್ರಾ.ಶಾ. ಮತ್ತೂರು
3. ಹಿ.ಪ್ರಾ.ಶಾ. ಸಿದ್ದರಹಳ್ಳಿ
4. ಹಿ.ಪ್ರಾ.ಶಾ. ಶೆಟ್ಟಿಹಳ್ಳಿ

## ಬಸ್ಸಿನ ಸೌಕರ್ಯವಿಲ್ಲದ ಗ್ರಾಮಾಂತರ ಶಾಲೆಗಳು :

1. ಹಿ.ಪ್ರಾ.ಶಾ. ಮಾಳೇನಹಳ್ಳಿ
2. ಕಿ.ಪ್ರಾ.ಶಾ. ಗುಡ್ರುಕೊಪ್ಪ
3. ಕಿ.ಪ್ರಾ.ಶಾ. ಶೆಟ್ಟಿಹಳ್ಳಿ (ಪುನರ್ವಸತಿ)
4. ಕಿ.ಪ್ರಾ.ಶಾ. ವೆಂಕಟಾಪುರ
5. ಕಿ.ಪ್ರಾ.ಶಾ. ಶ್ರೀರಾಮನಗರ

## ಪ್ರತಿ ದರ್ಶ ಚಯನ (Sample)

ಈ ಕ್ಲಸ್ಟರ್‌ನಲ್ಲಿ ತರಗತಿಗೊಬ್ಬರು ಶಿಕ್ಷಕರಿಲ್ಲದ ಸರ್ಕಾರಿ ಶಾಲೆಗಳನ್ನು ಸಮೂಹ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಪಡೆದು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆಗೆ ಮಾನದಂಡವಾಗಿ ತರಗತಿಗಳು ಹಾಗೂ ಶಿಕ್ಷಕರ ಸಂಖ್ಯೆಗಳನ್ನು ಇಟ್ಟುಕೊಳ್ಳಲಾಯಿತು.

## ಅಧ್ಯಯನಕ್ಕೆ ಒಳಪಟ್ಟ ಚಿಲಕಾದ್ರಿಹಳ್ಳಿ ಕ್ಲಸ್ಟರ್ ಶೈಕ್ಷಣಿಕ ಚಿತ್ರಣ :

| ಕ್ರ.ಸಂ. | ಶಾಲೆಯ ಹೆಸರು | ಶಿಕ್ಷಕರ ಸಂಖ್ಯೆ | ಮಕ್ಕಳ ಸಂಖ್ಯೆ |
|---|---|---|---|
| 1. | ಎಲ್.ಪಿ.ಎಸ್. ಮಲವಗೊಪ್ಪ ತಾಂಡ | 03 | 98 |
| 2. | ಎಲ್.ಪಿ.ಎಸ್. ಶ್ರೀರಾಮನಗರ | 03 | 68 |
| 3. | ಎಲ್.ಪಿ.ಎಸ್. ಗುಡ್ರೂಕೊಪ್ಪ | 02 | 41 |
| 4. | ಎಲ್.ಪಿ.ಎಸ್. ಶೆಟ್ಟಿಹಳ್ಳಿ ಪುನರ್ವಸತಿ | 02 | 55 |
| 5. | ಎಲ್.ಪಿ.ಎಸ್. ವೆಂಕಟಾಪುರ<br>(1 ನಿಯೋಜನೆಯಾಗಿದ್ದು ಏಕೋಪಾಧ್ಯಾಯ ಶಾಲೆ) | 02 | 10 |
| 6. | ಹೆಚ್.ಪಿ.ಎಸ್. ವಿದ್ಯಾನಗರ | 05 | 162 |
| 7. | ಹೆಚ್.ಪಿ.ಎಸ್. ಒಡ್ಡಿನಕೊಪ್ಪ | 05 | 165 |
| 8. | ಹೆಚ್.ಪಿ.ಎಸ್. ಮಳಲಿಕೊಪ್ಪ | 04 | 186 |
| 9. | ಹೆಚ್.ಪಿ.ಎಸ್. ಸಿದ್ದರಹಳ್ಳಿ | 05 | 98 |
| 10. | ಹೆಚ್.ಪಿ.ಎಸ್. ಮಾಳೇನಹಳ್ಳಿ | 04 | 90 |
| 11. | ಹೆಚ್.ಪಿ.ಎಸ್. ಕಾಚೀಕೆರೆ | 05 | 104 |

## 2. ಸಾಧನ ಮತ್ತು ತಂತ್ರಗಳು :

ಅಧ್ಯಯನದ ಮಾಹಿತಿ ಸಂಗ್ರಹಣೆ ಸಾಧನವಾಗಿ ಈ ಹಿಂದೆ ಬಹುಮುಖಿ -1 ತರಬೇತಿ ಅನುಷ್ಠಾನ ಮೌಲ್ಯಮಾಪನ ಮಾಡಲು ತಯಾರಿಸಲಾದ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ. ಸದರಿ ಪ್ರಶ್ನಾವಳಿಯನ್ನು ಬಹುಮುಖಿ -1 ತರಬೇತಿ ನೀಡಿದ ಕ್ಷೇತ್ರಗಳನ್ನು ಪ್ರಶ್ನೆಯಾಗಿ ಮಾರ್ಪಡಿಸಿ ಪ್ರಶ್ನಾವಳಿಯನ್ನು ತಯಾರಿಸಲಾಯಿತು.

## ಪ್ರಶ್ನಾವಳಿಯಲ್ಲಿರುವ ವಿಭಿನ್ನ ಕ್ಷೇತ್ರ ಹಾಗೂ ಘಟಕಗಳು :

### ಭಾಗ : 1 ದಾಖಲೆಗಳ ಅವಲೋಕನ :

**ಎ. ಶಾಲಾ ಮಾಹಿತಿ :**

ಇದರಡಿಯಲ್ಲಿ ಬಹುವರ್ಗ ಬೋಧನೆಗೆ ಅಗತ್ಯ ಪೂರ್ವಭಾವಿ ಮಾಹಿತಿಗಳಾದ ಶಾಲೆಯ ಬಗ್ಗೆ, ಮಕ್ಕಳು, ಶಿಕ್ಷಕರ ಸಂಖ್ಯೆ, ಬಹುಮುಖಿ ತರಬೇತಿ ಪಡೆದ ಪಡೆಯದ ಶಿಕ್ಷಕರ ಮಾಹಿತಿಯನ್ನು ಪಡೆಯಲಾಯಿತು.

**ಬಿ. ಬಹುತರಗತಿ ನಿರ್ವಹಣೆಗೆ ಶಿಕ್ಷಕರ ಪೂರ್ವಭಾವಿ ಸಿದ್ಧತೆ ಮಾಹಿತಿ :**

ತರಗತಿ ಹೊಂದಾಣಿಕೆ ವಾರ್ಷಿಕ ಸಾಮರ್ಥ್ಯ ಹೊಂದಾಣಿಕೆ, ಸಮಾನಾಂಶಗಳನ್ನಾಧರಿಸಿದ, ವೇಳಾಪಟ್ಟಿ, ಪಾಠಯೋಜನೆ, ಬೋಧನೋಪಕರಣ ಮಕ್ಕಳ ಕಲಿಕೋಪಕರಣಗಳು, ಪ್ರಗತಿ ತಃಖ್ತೆ, ಪರಿಹಾರ ಬೋಧನೆಗೆ ಒಳಪಟ್ಟ ಮಕ್ಕಳ ಮಾಹಿತಿ.

## ಭಾಗ - 2 ಪಾಠ ಅವಲೋಕನ :

ತರಗತಿ ಸನ್ನಿವೇಶದಲ್ಲಿ ಪಾಠವನ್ನು ಅವಲೋಕಿಸಿ ಮಾಹಿತಿ ಸಂಗ್ರಹಣೆ ಮಾಡುವುದಾಗಿದೆ. ಇದರಡಿಯಲ್ಲಿ ಬರುವ ಅಂಶಗಳು.

ಕಲಿಸುವ ವಿಷಯ ಹಾಗೂ ಸಾಮರ್ಥ್ಯ, ತರಗತಿ ಹಾಗೂ ಸಾಮರ್ಥ್ಯ ಹೊಂದಾಣಿಕೆ, ತರಗತಿಯಲ್ಲಿ ನೀಡಿದ ಚಟುವಟಿಕೆಗಳು ಅವು ಸಾಮರ್ಥ್ಯ ಆದರಿಸಿದ್ದವೇ ? ಶಿಕ್ಷಕರು ಬಳಸಿದ ತರಗತಿ ನಿರ್ವಹಣೆಯ ವಿಧಾನ, ಸಾಮರ್ಥ್ಯ ಆಧರಿಸಿದ ಬೋಧನೋಪಕರಣಗಳು ಮತ್ತು ಕಲಿಕೋಪಕರಣಗಳು, ಕಲಿಕೋಪಕರಣಗಳು ಹೆಚ್ಚುವರಿ ಕಲಿಕೆಗೆ ಸಹಾಯಕವಾಗಿದ್ದವೇ? ನೇರ ಕಲಿಕೆಗೆ ಅಳವಡಿಸಿದ ತರಗತಿ ಅದರ ನಿರ್ವಹಣೆ, ಸ್ಥಳ ನಿರ್ವಹಣೆ, ಸಮಯ ಹಂಚಿಕೆ ಎಲ್ಲಾ ಮಕ್ಕಳು ಕಲಿಕೆಯಲ್ಲಿ ತೊಡಗಿಕೊಂಡ ಬಗೆ ಹಾಗೂ ಅವಲೋಕಿಸಿದ ತರಗತಿಯಲ್ಲಿನ ಪರಿಣಾಮಕಾರಿ ಕಲಿಕೆಯನ್ನು ದಾಖಲಿಸುವುದಾಗಿದೆ.

## ಭಾಗ - 3 ತರಬೇತಿ ಅನುಪಾಲನೆ :

2003-04ನೇ ಶೈಕ್ಷಣಿಕ ವರ್ಷದಲ್ಲಿ ಬಹುಮುಖಿ -1 ತರಬೇತಿಯನ್ನು ನೀಡಲಾಗಿದ್ದು, ತರಬೇತಿಯ ಅನುಪಾಲನೆ ಜಿಲ್ಲಾ ಮಟ್ಟದ ಉಪನಿರ್ದೇಶಕರು ಆಡಳಿತ ಹಾಗೂ ಅಭಿವೃದ್ಧಿ (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ) ವತಿಯಿಂದ ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ, ಸಮೂಹ ಸಂಪನ್ಮೂಲ ಕೇಂದ್ರದಿಂದಾದ ಶಾಲಾ ಭೇಟಿ ಹಾಗೂ ಮಾರ್ಗದರ್ಶನದ ಮಾಹಿತಿಯನ್ನು ಪಡೆಯುವುದಾಗಿದೆ.

## ಭಾಗ - 4 ಶಿಕ್ಷಕರ / ಅವಲೋಕಿಸಿದವರ ಅಭಿಪ್ರಾಯ :

ಇದರಡಿಯಲ್ಲಿ ಬಹುಮುಖಿ ತರಬೇತಿ ಅನುಷ್ಠಾನಗೊಳಿಸುವಲ್ಲಿ ಶಿಕ್ಷಕರಿಗೆ ಇರುವ ತೊಡಕುಗಳು ಮತ್ತು ತರಬೇತಿಯನ್ನು ಉತ್ತಮವಾಗಿ ತರಗತಿಯಲ್ಲಿ ಅನುಷ್ಠಾನಗೊಳಿಸಲು ಶಿಕ್ಷಕರ ಅಗತ್ಯ ಅಂಶಗಳಾವುವು ಎಂಬುದನ್ನು ಗುರುತಿಸಲು ಮಾಹಿತಿಯನ್ನು ಪಡೆಯಲಾಯಿತು.

## ಮಾಹಿತಿ ಸಂಗ್ರಹಣೆ ವಿಧಾನ :

ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ದಿನಾಂಕ : 17-03-2007ರ ಸಮಾಲೋಚನ ಸಭೆಯಲ್ಲಿ ಭಾಗವಹಿಸಿ ಶಾಲೆಗಳಿಗೆ ಬಹುಮುಖಿ -1 ತರಬೇತಿ ಅನುಷ್ಠಾನ ಮೌಲ್ಯಮಾಪನದ ಗುರಿ ಉದ್ದೇಶಗಳ ಮಾಹಿತಿ ನೀಡಲಾಯಿತು. ನೀಡಬೇಕಾದ ಮಾಹಿತಿಗಳ ಪರಿಚಯ ಅಧ್ಯಯನಕ್ಕೆ ಅಗತ್ಯ ಮಾಹಿತಿ ಸಂಗ್ರಹಿಸಲು ಡಯಟ್ ಉಪನ್ಯಾಸಕರುಗಳು ಮಾಡಿಕೊಡಲಾಯಿತು. ಶಾಲೆಗೆ ಭೇಟಿ ನೀಡಿದರು. ಪ್ರಶ್ನಾವಾವಳಿಯನ್ನಾಧರಿಸಿದ ಮಾಹಿತಿಯನ್ನು ಸಂಗ್ರಹಿಸಿದರು.

ಮಾರ್ಚ್ ತಿಂಗಳಲ್ಲಿ ಶಾಲೆಗಳಲ್ಲಿ ಬೋಧನಾ ಚಟುವಟಿಕೆಗಳು ಅಂತ್ಯವಾಗಿದ್ದರಿಂದ ಭಾಗ -2 ಪಾಠಗಳ ಅವಲೋಕನ ಮಾಡಿ ವಸ್ತು ನಿಷ್ಠ ಮಾಹಿತಿ ಪಡೆಯಲಾಗಲಿಲ್ಲ. ಆದರೆ ದಾಖಲೆಗಳ ಅವಲೋಕಿಸಿ ಸಂದರ್ಶನದಿಂದ

ಪಾಠ ಸಿದ್ಧತೆ, ತರಗತಿ ನಿರ್ವಹಣೆ ವಿಧಾನ, ಬೋಧನೆ, ಕಲಿಕೋಪಕರಣಗಳ ಮಾಹಿತಿ ಸಂಗ್ರಹಿಸಲಾಯಿತು. ಸಂಶೋಧಕರು ಎಲ್ಲಾ ಶಾಲೆ ಭೇಟಿ ನೀಡಿ ಶೈಕ್ಷಣಿಕ ಚಿತ್ರಣ ಪಡೆಯಲಾಯಿತು.

# ಮಾಹಿತಿ ವಿಶ್ಲೇಷಣೆ :

ಸಂಗ್ರಹಿಸಿದ ದತ್ತಾಂಶವನ್ನಾಧರಿಸಿದ ಮಾಹಿತಿ ವಿಶ್ಲೇಷಣೆ ಈ ಕೆಳಕಂಡಂತೆ ಇದೆ.

## ಭಾಗ : 1 ದಾಖಲೆಗಳ ಅವಲೋಕನ :

1. ಅಧ್ಯಯನಕ್ಕೆ ಆಯ್ದ ಶಾಲೆಗಳ ಸಂಖ್ಯೆ 11
2. ಎಲ್.ಪಿ.ಎಸ್. 05
3. ಹೆಚ್.ಪಿ.ಎಸ್. ಸಂಖ್ಯೆ 06
4. ಶಿಕ್ಷಕರ ಸಂಖ್ಯೆ 40
5. ಮಕ್ಕಳ ಸಂಖ್ಯೆ 1076
6. ಬಹುಮುಖಿ ತರಬೇತಿ ಪಡೆದ ಶಿಕ್ಷಕರ ಸಂಖ್ಯೆ 22
7. ಬಹುಮುಖಿ ತರಬೇತಿ ಪಡೆಯದ ಶಿಕ್ಷಕರು 18
8. ತರಗತಿ ಹೊಂದಾಣಿಕೆ ಮಾಡಿಕೊಳ್ಳದ ಶಾಲೆಗಳ ಸಂಖ್ಯೆ 06
9. ತರಗತಿ ಹೊಂದಾಣಿಕೆ ಮಾಡಿಕೊಂಡ ಶಾಲೆಗಳ ಸಂಖ್ಯೆ 07
10. ತರಗತಿ ಹೊಂದಾಣಿಕೆ ಎಲ್ಲಾ ಶಾಲೆಯಲ್ಲಿ ಅನುಕ್ರಮವಾಗಿದೆ
11. ವಾರ್ಷಿಕ ಸಾಮರ್ಥ್ಯ ಹೊಂದಾಣಿಕೆ ಪಟ್ಟಿ ಇಲಾಖೆ ನೀಡಿರುವುದು ಇದ್ದು ಶಿಕ್ಷಕರರೇ ಸ್ವತಃ ತಯಾರಿಸಿಕೊಂಡಿಲ್ಲ.
12. ಬಹುವರ್ಗ ವೇಳಾಪಟ್ಟಿ ಎಲ್ಲಾ ಶಾಲೆಯಲ್ಲಿ ಇದೆ.
13. ಬಹುವರ್ಗ ಬೋಧನೆಗೆ ಪಾಠ ಯೋಜಿಸಿರುವಿಕೆ 04 ಶಾಲೆಯಲ್ಲಿ ಗುರುತಿಸಲಾಯಿತು.
14. ಯೋಜನೆಯಲ್ಲಿ ಪಾಠ ಸಂಖ್ಯೆ ಎಣಿಸಿದಾಗ ಸಾಕಷ್ಟು ಕಂಡು ಬಂದಿಲ್ಲ.
15. 05 ಶಾಲೆಗಳಲ್ಲಿ ಶಿಕ್ಷಕರ ಬೋಧನೆಕರಣಗಳಿವೆ. (ಟಿ.ಎಲ್.ಎಂ.)
16. 06 ಶಾಲೆಗಳಲ್ಲಿ ಶಿಕ್ಷಕರು ಬೋಧನೆಕರಣಗಳನ್ನು ತರಗತಿ ನಿರ್ವಹಣೆಯಲ್ಲಿ ಬಳಸುತ್ತಿಲ್ಲ.
17. ಸಹಾಯಕ ಕಲಿಕೋಪಕರಣಗಳು (ಎಸ್.ಎಲ್.ಎಂ.) 04 ಶಾಲೆಗಳಲ್ಲಿ ಭಾಗಶಃ ಬಳಕೆಯಾಗುತ್ತದೆ.
18. ಸಹಾಯಕ ಕಲಿಕೋಪಕರಣಗಳು (ಎಸ್.ಸಿ.ಎಂ.) 07 ಶಾಲೆಗಳಲ್ಲಿ ಬಳಸುತ್ತಿಲ್ಲ.
19. ಪ್ರಗತಿ ಪತ್ರ ಎಲ್ಲಾ ಶಾಲೆಗಳಲ್ಲಿ ಬಳಸಲಾಗುತ್ತಿದೆ.
20. ಪರಿಹಾರ ಬೋಧನೆ ಹಾಗೂ ಮಕ್ಕಳ ನಂತರದ ಪ್ರಗತಿ ದಾಖಲೆಯನ್ನು 11 ಶಾಲೆಯಲ್ಲಿ ನಿರ್ವಹಿಸಿಲ್ಲ.

# ಪಾಠ ಅವಲೋಕನ :

ಮಾರ್ಚ್ ಅಂತ್ಯವಾದ್ದರಿಂದ ತರಗತಿ ಪಾಠ ವೀಕ್ಷಣೆ ಮಾಡಲಾಗಲಿಲ್ಲ.

# ತರಬೇತಿ ಅನುಪಾಲನೆ :

1. ಜಿಲ್ಲಾ ಮಟ್ಟದ ಅಧಿಕಾರಿಗಳು 06 ಶಾಲೆಗಳಿಗೆ 11 ಬಾರಿ ಭೇಟಿ ನೀಡಲಾಗಿದೆ.
2. ತಾಲ್ಲೂಕು ಮಟ್ಟದ ಅಧಿಕಾರಿಗಳು 09 ಶಾಲೆಗಳಿಗೆ 30 ಬಾರಿ ಭೇಟಿ ನೀಡಲಾಗಿದೆ.
3. ಬಿ.ಆರ್.ಸಿ. ಹಂತದ ಸಂಪನ್ಮೂಲ ವ್ಯಕ್ತಿಗಳು 05 ಶಾಲೆಗಳಿಗೆ 12 ಬಾರಿ ಭೇಟಿ ನೀಡಲಾಗಿದೆ.
4. ಸಮೂಹ ಸಂಪನ್ಮೂಲ ವ್ಯಕ್ತಿಗಳು 11 ಶಾಲೆಗಳಿಗೂ 60 ಬಾರಿ ಭೇಟಿ ನೀಡಲಾಗಿದೆ.

ಮೇಲ್ಕಂಡ ವಿಭಿನ್ನ ಹಂತದ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳು ಶಾಲೆಗಳಿಗೆ ಭೇಟಿ ನೀಡಿದ್ದರೂ ಬಹುಮುಖಿ ತರಬೇತಿ ಅನುಷ್ಠಾನದ ಪರಿಶೀಲನೆಯಾಗಿರುವುದಿಲ್ಲ.

### ಪರಿಶೀಲಿಸಿ ಮಾರ್ಗದರ್ಶನ ನೀಡಿದ ಕ್ಷೇತ್ರ ಹಾಗೂ ನೀಡಿದ ಸಲಹೆಗಳು.

1. ದಾಖಲೆಗಳ ನಿರ್ವಹಣೆ
2. ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಗುರುತಿಸುವಿಕೆ
3. ತರಗತಿ ಬೋಧನೆಯಲ್ಲಿ ಬಳಸಬಹುದಾದ ಸಾಮಾನ್ಯ ತಂತ್ರಗಳು
4. ಶೈಕ್ಷಣಿಕ ಪ್ರಗತಿಗಾಗಿ ಸಾಮಾನ್ಯ ಸೂಚನೆಗಳು

# ಶಿಕ್ಷಕರ ಅಭಿಪ್ರಾಯ :

## ಬಹುಮುಖಿ ಅನುಷ್ಠಾನದಲ್ಲಿರುವ ತೊಡಕುಗಳು :

1. ಮು.ಶಿ. ಬರವಣಿಗೆ ಹೊರೆ ಜಾಸ್ತಿ ಇದ್ದು, ತರಗತಿ ಹಂಚಿಕೆ ಕಷ್ಟವಾಗುತ್ತಿದೆ.
2. ಹೆಚ್.ಪಿ.ಎಸ್. ಇರುವಲ್ಲಿ ಬಹುವರ್ಗ ಬೋಧನೆ ಅನುಷ್ಠಾನ ಕಷ್ಟವಾಗುತ್ತದೆ.
3. ಮಕ್ಕಳ ಸಂಖ್ಯೆ ಹೆಚ್ಚಿರುವಲ್ಲಿ ತರಗತಿ ಹೊಂದಾಣಿಕೆ ಕಷ್ಟ.
4. ಭಾಷಾ ಸಮಸ್ಯೆ ಇರುವಲ್ಲಿ ಬಹುವರ್ಗ ಬೋಧನೆ ಸಮಸ್ಯೆಯಾಗುತ್ತದೆ.
5. ಶಿಕ್ಷಕರು ಅನಿರೀಕ್ಷಿತ ನಿಯೋಜನೆಯಾದಾಗ ತರಗತಿ ಹಂಚಿಕೆ ಮಾಡಿಕೊಳ್ಳುವುದು ಕಷ್ಟ.
6. ಬಹುತರಗತಿಗಳ ನಿರ್ವಹಣಾ ಯೋಜನೆ, ಸಾಮರ್ಥ್ಯವಾರು ಚಟುವಟಿಕೆ, ಟಿ.ಎಲ್.ಎಂ. ತಯಾರಿಸುವಿಕೆ ಮತ್ತು ಬಳಕೆ ಮಾಹಿತಿ ಇರುವುದಿಲ್ಲ.
7. ಅಭ್ಯಾಸ ಚಟುವಟಿಕೆ ಮಾಡಿಸುವುದು ಸಾಧ್ಯವಾಗುವುದಿಲ್ಲ.
8. ಗೃಹಪಾಠ ತಿದ್ದುವಿಕೆ, ಮಾರ್ಗದರ್ಶನ ನೀಡಲಾಗುತ್ತಿಲ್ಲ.

## ಉತ್ತಮ ಅನುಷ್ಠಾನಕ್ಕೆ ಶಿಕ್ಷಕರ ಸಲಹೆಗಳು :

1. ಶಾಲೆಯ ಎಲ್ಲಾ ಶಿಕ್ಷಕರಿಗೂ ತರಬೇತಿ ನೀಡಬೇಕು
2. ವ್ಯವಸ್ಥಿತ ಯೋಜನೆ ತಯಾರಿಸಿ ಬಳಸಬೇಕು.
3. ವಿಷಯ ಸಂಪಾದನೆ ಮಾಡಿಕೊಂಡಿರಬೇಕು.
4. ತಜ್ಞರಿಂದ ಮಾದರಿ ಪಾಠ ನೀಡಿ ಅದರಲ್ಲಿ ಬಳಸಬಹುದಾದ ವಿಭಿನ್ನ ತಂತ್ರ ವಿಧಾನಗಳ ಪರಿಚಯವಿರಬೇಕು.
5. ಮುಖ್ಯ ಶಿಕ್ಷಕರಿಗೆ ಕಛೇರಿ ಕೆಲಸದ ಹೊರೆ ಕಡಿಮೆ ಮಾಡಬೇಕು.
6. ಕನ್ನಡ ಸಾಮರ್ಥ್ಯ, ಹೊಂದಾಣಿಕೆ ತರಬೇತಿ ಅಗತ್ಯ.
7. ಚಟುವಟಿಕೆಗಳ ಅವಧಿಯಲ್ಲಿ ತರಗತಿ ನಿಯಂತ್ರಿಸುವ ಕೌಶಲಗಳ ಶಿಕ್ಷಕರು ಮೈಗೂಡಿಸಿಕೊಳ್ಳಬೇಕು.

## ಅವಲೋಕಿಸಿದವರ ಅಭಿಪ್ರಾಯ :

1. 2 ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದ್ದು ಶಿಕ್ಷಕರ ಕೊರತೆ ಇದ್ದು ವೈಯಕ್ತಿಕ ಗಮನ ನೀಡುವುದು ಕಷ್ಟ ಸಾಧ್ಯವಾಗಿದೆ.
2. ನಾಲ್ಕು ಶಾಲೆಗಳಲ್ಲಿ ಟಿ.ಎಲ್.ಎಂ. / ಎಸ್.ಎಲ್.ಎಂ. ಬಳಕೆಯಿದ್ದು, ಉತ್ತಮ ಶೈಕ್ಷಣಿಕ ವಾತಾವರಣವಿದೆ.
3. ತರಬೇತಿ ನೀಡಿಕೆ ತರಗತಿ ಕೋಣೆಯಲ್ಲಿ ಪರಿಣಾಮಕಾರಿ ಅನುಷ್ಠಾನದ ಅವಶ್ಯಕತೆ ಇದೆ.

## ಉತ್ತಮ ಅನುಷ್ಟಾನಕ್ಕೆ ಸಂಶೋಧಕರ ಸಲಹೆಗಳು :

**ತರಬೇತಿ** :

1. ಬಹುತರಗತಿ ನಿರ್ವಹಿಸುತ್ತಿರುವ ಶಾಲೆಯ ಎಲ್ಲಾ ಶಿಕ್ಷಕರಿಗೂ ಒಟ್ಟಿಗೆ ಒಂದು ತಂಡದಲ್ಲಿ ಬಹುಮುಖಿ -1 ಮತ್ತು ಬಹುಮುಖಿ -2 ತರಬೇತಿಯನ್ನು ನೀಡಬೇಕು.

2. ತರಬೇತಿ ಅವಧಿಯಲ್ಲಿ ಬಹುತರಗತಿ ನಿರ್ವಹಣಾ ಮಾದರಿ ಪಾಠವನ್ನು ನೀಡಬೇಕು.

## ಮುಖ್ಯ ಶಿಕ್ಷಕರು ಹೀಗಿದ್ದರೆ

1. ಶಾಲಾ ಶೈಕ್ಷಣಿಕ ಚಿಂತಕನಾಗಿ,

   ದೂರದೃಷ್ಠಿಯುಳ್ಳವರಾಗಿ,

   ಕಛೇರಿ ಕೆಲಸಕ್ಕೆ ಸೀಮಿತ ಅವಧಿ ಮೀಸಲಿಡಿ.

   ಎಲ್ಲಾ ಮಕ್ಕಳ ಪರಿಚಯವಿರಲಿ,

ಎಲ್ಲಾ ತರಗತಿ ಮಕ್ಕಳೊಡನೆ ಒಡನಾಡಿತನ ಇರಲಿ.

## ಶಿಕ್ಷಕರು ಹೀಗಿದ್ದರೆ

ವಾರ್ಷಿಕ, ಮಾಸಿಕ ಸಾಪ್ತಾಹಿಕ ಕ್ರಿಯಾ ಯೋಜನೆ ತಯಾರಿಸಿರಬೇಕು

ಯೋಜನೆಯ ಪರಿಚಯ ಮಕ್ಕಳಿಗಿರಲಿ

ಸಾಮರ್ಥ್ಯ ಆಧರಿತ ಚಟುವಟಿಕೆಗಳು

ಟಿ ಎಲ್ ಎಂ ತಯಾರಿಕೆ ಮತ್ತು ಬಳಕೆ

ಕಲಿಕಾ ಕಾರ್ನರ್ ಇದ್ದು ಅದರ ಪರಿಚಯ ಹಾಗೂ ಬಳಕೆ ಮಕ್ಕಳಿಗೆ ತಿಳಿದಿರಲಿ

ಕಲಿಕಾ ಚಪ್ಪರದಲ್ಲಿ ನಾವೀನ್ಯತೆ

ಮೌಲ್ಯಮಾಪನ ರೀತಿ ನಿರ್ಧಾರ

ಕ್ರಿಯಾ ಸಂಶೋಧಕ

ಪ್ರಯೋಗ ಶೀಲತೆ

## ಮಕ್ಕಳಿಗೆ ಇವೆಲ್ಲ ತಿಳಿದಿರಬೇಕು.

1. ಶಾಲಾ ಯೋಜನೆ, ಶೈಕ್ಷಣಿಕ ಗುರಿ ಮತ್ತು ಮಾರ್ಗೋಪಾಯಗಳ ಪರಿಚಯಿಸಿರಬೇಕು.

   ವಾರ್ಷಿಕ, ಮಾಸಿಕ, ಸಾಪ್ತಾಹಿಕ ದಿನಚರಿ,

   ಕಲಿಕಾ ಕಾರ್ನರ್ ಬಳಕೆ

## ಸಮೂಹ ಸಂಪನ್ಮೂಲ ವ್ಯಕ್ತಿ ಹೀಗಿರಬೇಕು.

1. ಸಮೂಹ ಸಂಪನ್ಮೂಲ ವ್ಯಕ್ತಿ ಎಲ್ಲಾ ಶಿಕ್ಷಕರಿಗೂ ಲಭ್ಯವಿರಬೇಕು.
2. ದಿನಚರಿಯು ಶಾಲಾ ಭೇಟಿ, ಪಾಠ ಅವಲೋಕನ, ಶೈಕ್ಷಣಿಕ ಮಾರ್ಗದರ್ಶನಕ್ಕೆ ಸೀಮಿತವಿರಲಿ.
3. ತುರ್ತು ಸಂದರ್ಭದಲ್ಲಿ ಮಾತ್ರ ತಾಲ್ಲೂಕು ಕೇಂದ್ರಕ್ಕೆ ಆಗಮಿಸಬೇಕು.
4. ಸಮೂಹ ಸಂಪನ್ಮೂಲ ವ್ಯಕ್ತಿಗೆ ಕ್ಲಸ್ಟರ್‌ನ ಶಿಕ್ಷಕರ ಬಲ ಹಾಗೂ ಕೊರತೆಗಳು

   .(ಣಡಿಜಟಿರಣಃ ಚಿಟಿಜ ತಿಜಚಿಞಟಿಜ) ಅರಿವಿದ್ದು, ಅದಕ್ಕೆ ತಕ್ಕಂತೆ ತರಬೇತಿಯನ್ನು ಆಯೋಜಿಸಬೇಕು.

## ಸಮಾಲೋಚನಾ ಕಾರ್ಯಾಗಾರಗಳಲ್ಲಿ ಇವೆಲ್ಲಾ ಚರ್ಚೆಯಾಗಬೇಕು.

1. ಬಹುತರಗತಿ ನಿರ್ವಹಣೆಯ ವಿಭಿನ್ನ ತಂತ್ರಗಳು,

   ವಿಧಾನಗಳು,

   ಕಲಿಕಾ ಚಪ್ಪರ ನಿರ್ಮಾಣ

ಹಿರೇಮಣಿ ಬಳಕೆ,

ಇನ್ನೊಬ್ಬರ ಅನುಪಸ್ಥಿತಿಯಲ್ಲಿ ತರಗತಿ ನಿರ್ವಹಣೆ

ವಿಷಯ ಸಂಪಾದನೆ

2. ಕ್ಲಿಷ್ಟ ಸಾಮರ್ಥ್ಯಗಳಿಗೆ ಚಟುವಟಿಕೆಗಳು

ಬೋಧನೋಪಕರಣಗಳ ತಯಾರಿಕೆ ಮತ್ತು ಬಳಕೆ

ಕಲಿಕೋಪಕರಣಗಳು

ಮೌಲ್ಯಮಾಪನ, ಲಿಖಿತ ಮತ್ತು ಮೌಖಿಕ

## ಕ್ಲಸ್ಟರ್ ಸಭೆಗಳಲ್ಲಿ ಹೀಗೆ ಮಾಡಬಹುದೇ ?

1. ಕ್ಲಸ್ಟರ್‌ನಲ್ಲಿ ಯಶೋಗಾಥೆಗಳಿಗೆ ವೇದಿಕೆ ಇರಲಿ.
2. ಅನುಭವ ಹಂಚಿಕೆಗೆ ಅವಧಿ ಮೀಸಲಿಡಿ.
3. ಆಡಳಿತಾತ್ಮಕ ವಿಷಯ ಚರ್ಚೆ ಸಂಕ್ಷಿಪ್ತವಾಗಿರಲಿ.
4. ಇಲಾಖಾ ಸುತ್ತೋಲೆ ಓದಲು ನೀಡಿ, ಪ್ರಶ್ನೆಗಳಿದ್ದರೆ ಅಂತ್ಯದಲ್ಲಿ ಪರಿಹರಿಸಿಕೊಳ್ಳಲಿ.

## ತರಬೇತಿ ಅನುಪಾಲನೆ :

## ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಹೀಗಿದ್ದರೆ

- ಎಲ್ಲಾ ತರಬೇತಿಗಳ ಸಂಪನ್ಮೂಲ ವ್ಯಕ್ತಿಗಳಾಗಿರಬೇಕು
- ಸಮೂಹ ಸಂಪನ್ಮೂಲ ಕೇಂದ್ರಕ್ಕೆ ಭೇಟಿ ನೀಡಿ ಮಾರ್ಗದರ್ಶನ ನೀಡ ಬೇಕು
- ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಗುರುತಿಸಿದ ಸಮಸ್ಯಾತ್ಮಕ ಶಾಲೆಗೆ ತಂಡದಲ್ಲಿ ಭೇಟಿ ನೀಡಿ ಸ್ಥಳದಲ್ಲೆ ಪರಿಹರಿಸಬೇಕು
- ಪ್ರತಿ ಡಯಟ್ / ಬಿ.ಆರ್.ಸಿ. ಇಜಣ ಛಟುಟುಛ (ಸ್ಥಳದಲ್ಲೇ ಪರಿಹಾರ ಸೂಚಿಸುವ ಸಂಪನ್ಮೂಲಗಳ ವ್ಯಕ್ತಿಗಳ ತಂಡ) ಹೊಂದಿರಬೇಕು
- ಪ್ರಯೋಗಶೀಲ ಶಿಕ್ಷಕರನ್ನು ಗುರುತಿಸಿ ಪ್ರೋತ್ಸಾಹಿಸಬೇಕು
- ಅವರ ಹೊಸ ವಿಚಾರಗಳನ್ನು ಇತರೆ ಶಿಕ್ಷಕರಿಗೆ ಹಂಚಿಕೆಯಾಗಬೇಕು

## ಕ್ಲಸ್ಟರ್‌ನ ತಾತ್ಕಾಲಿಕ ಅಗತ್ಯಗಳು :

1. ಹೆಚ್.ಪಿ.ಎಸ್. ಮಳಲೀಕೊಪ್ಪದಲ್ಲಿ 185 ಮಕ್ಕಳು, 5 ಶಿಕ್ಷಕರಿದ್ದಾರೆ.
   ಎಲ್.ಪಿ.ಎಸ್. ಶ್ರೀರಾಮನಗರದಲ್ಲಿ 72 ಮಕ್ಕಳಿದ್ದು, 3 ಶಿಕ್ಷಕರಿದ್ದಾರೆ.
   ಆದ್ದರಿಂದ ಒಬ್ಬ ಶಿಕ್ಷಕರನ್ನು ಹೆಚ್.ಪಿ.ಎಸ್. ಮಳಲೀಕೊಪ್ಪಕ್ಕೆ ನಿಯೋಜಿಸಬಹುದಾಗಿದೆ.

2. ಎಲ್.ಪಿ.ಎಸ್. ಶ್ರೀರಾಮನಗರ ಇಬ್ಬರು ಶಿಕ್ಷಕರಿಗೆ ತರಣಿ ತರಬೇತಿ ಅಗತ್ಯವಿದೆ.

3. ಹೆಚ್.ಪಿ.ಎಸ್. ಮಾಳೇನಹಳ್ಳಿ ಶಾಲೆಯ ಆರನೇ ತರಗತಿ ಕಲಿಕೆ ಹಿನ್ನೆಡೆಗೆ ಕಾರಣವಾದ ಪೀಡಿಂಗ್ (feeding school) ಎಲ್.ಪಿ.ಎಸ್. ತಡಸ ಶಾಲೆಗೆ ಭೇಟಿ ನೀಡಿ ಭಾಷಾ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು.

# ಪರಿಹಾರೋಪಾಯಗಳು :

ಅಧ್ಯಯನದಿಂದ ಕಂಡುಕೊಂಡ ಸಲಹೆಗಳನ್ನು ಅಗತ್ಯ ವ್ಯಕ್ತಿಗಳಿಗೆ ತಲುಪಿಸಲಾಗಿದ್ದು, ಸಂಶೋಧಕರು ಪರಿಹರಿಸಬಹುದಾದ ಕ್ಷೇತ್ರಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಜಾರಿಗೆ ತರಲಾಗಿದೆ.

ಸಂಶೋಧಕರು ಕೇವಲ ಸಲಹೆಗಳನ್ನು ನೀಡದೆ ದತ್ತಾಂಶವನ್ನಾಧರಿಸಿ ಕ್ರಿಯಾ ಯೋಜನೆಯನ್ನು ತಯಾರಿಸಿ ಪರಿಹರಿಸಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಯಶಸ್ವಿಯಾಗಿ ಬಹುತರಗತಿಗಳನ್ನು ನಿರ್ವಹಿಸುತ್ತಿರುವ ಶಿಕ್ಷಕರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಂಡು ಅಧ್ಯಯನಕ್ಕೆ ಒಳಪಟ್ಟ ಕ್ಲಸ್ಟರ್‌ನ ಶಾಲಾ ಶಿಕ್ಷಕರಿಗೆ 3 ದಿನಗಳ ಬಹುಮುಖಿ -2 ತರಬೇತಿಯನ್ನು ಬಿಆರ್ ಸಿ ಶಿವಮೊಗ್ಗ ವತಿಯಿಂದ ನೀಡಲಾಗಿದೆ.

ತರಬೇತಿಯ ಅನುಷ್ಟಾನವನ್ನು ನಾವೀನ್ಯ ಪ್ರಯೋಗ ಅಳವಡಿಸಿ ಯಶಸ್ವಿಯಾಗಿರುವ ಶಿಕ್ಷಕರ ಯಶೋಗಾಥೆಯ ವಿಡಿಯೋ ಚಿತ್ರೀಕರಣವನ್ನು ಒಳಗೊಂಡಂತೆ ಅಧ್ಯಯನದಲ್ಲಿ ಗುರುತಿಸಿದ ತೊಡಕುಗಳನ್ನು ಪರಿಹರಿಸಲು ಪ್ಯಾಕೇಜು ತಯಾರಿಸಿ 2 ದಿನಗಳ ಬಹುತರಗತಿಗಳ ನಿರ್ವಹಣಾ ವಿಭಿನ್ನ ತಂತ್ರ ವಿಧಾನಗಳ ಮುಖಾಮುಖಿ ಕಾರ್ಯಾಗಾರವನ್ನು ಏರ್ಪಡಿಸಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ಅಗತ್ಯ ಸಂಪನ್ಮೂಲಗಳು ಹಾಗೂ ಕ್ರಿಯಾಯೋಜನೆಯ ಮಾಹಿತಿಯನ್ನು ನೀಡಲಾಗಿದೆ.

2007-08ನೇ ಶೈಕ್ಷಣಿಕ ವರ್ಷದಲ್ಲಿ ಕಾಲಿಕ ಮಾರ್ಗದರ್ಶನವನ್ನು ನೀಡಿ ಅಂತ್ಯದಲ್ಲಿ ತರಬೇತಿ ಅನುಷ್ಠಾನದ ಮೌಲ್ಯ ಮಾಪನವನ್ನು ಹಮ್ಮಿಕೊಳ್ಳಲಾಗಿದೆ.

# ಅನುಬಂಧಗಳು :

## ದತ್ತಾಂಶ ಸಂಗ್ರಹಣೆ ವೇಳಾಪಟ್ಟಿ :

| ಕ್ರ.ಸಂ. | ಶಾಲೆಯ ಹೆಸರು | ಉಪನ್ಯಾಸಕರ ಹೆಸರು |
|---|---|---|
| 1. | ಹೆಚ್.ಪಿ.ಎಸ್. ಕಾಟೀಕೆರೆ | ಶ್ರೀ ದೊಡ್ಡ ಭೀಮನಗೌಡ ತಂಗೋಡರ್ |
| 2. | ಎಲ್.ಪಿ.ಎಸ್. ವೆಂಕಟಾಪುರ | ಶ್ರೀ ಹೆಚ್. ರಾಮಲಿಂಗಪ್ಪ |
| 3. | ಎಲ್.ಪಿ.ಎಸ್. ಶೆಟ್ಟಿಹಳ್ಳಿ ಪುನರ್ವಸತಿ | ಶ್ರೀ ಎ.ಡಿ. ಹನುಮಂತಪ್ಪ |
| 4. | ಎಲ್.ಪಿ.ಎಸ್. ಗುಡ್ರುಕೊಪ್ಪ | ಶ್ರೀ ಎ.ಕೆ. ನಿಂಗಪ್ಪ |
| 5. | ಹೆಚ್.ಪಿ.ಎಸ್. ಮಾಳೇನಹಳ್ಳಿ | ಶ್ರೀಮತಿ ಶಬಾನಾ ಆಜುಂ |
| 6. | ಹೆಚ್.ಪಿ.ಎಸ್. ಸಿದ್ಧರಹಳ್ಳಿ | ಶ್ರೀ ಕೃಷ್ಣಮೂರ್ತಿ |
| 7. | ಹೆಚ್.ಪಿ.ಎಸ್. ಮಳಲಿಕೊಪ್ಪ | ಶ್ರೀಮತಿ ಕೆ. ವನಮಾಲ |
| 8. | ಎಲ್.ಪಿ.ಎಸ್. ಶ್ರೀರಾಮನಗರ | ಶ್ರೀಮತಿ ಆರ್.ವಿ. ಸುಧಾ |
| 9. | ಹೆಚ್.ಪಿ.ಎಸ್. ಒಡ್ಡಿನಕೊಪ್ಪ | ಶ್ರೀಮತಿ ಎಸ್. ರೇಣುಕಾ |
| 10. | ಎಲ್.ಪಿ.ಎಸ್. ಮಲವಗೊಪ್ಪ ತಾಂಡ | ಶ್ರೀಮತಿ ನವೀದಾ ಖಾನಂ |
| 11. | ಹೆಚ್.ಪಿ.ಎಸ್. ವಿದ್ಯಾನಗರ | ಶ್ರೀಮತಿ ಕೆ. ವನಮಾಲ |

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.

**ಶಾಲೆಗಳಲ್ಲಿ ಬಹುಮುಖಿ ತರಬೇತಿ ಅನುಷ್ಠಾನವಾದ ಬಗ್ಗೆ**
**ಮಾಹಿತಿ ಸಂಗ್ರಹಣೆ ಮತ್ತು ಮೌಲ್ಯಮಾಪನ**

**ಪ್ರಶ್ನಾವಳಿ :**

## ಭಾಗ – 1 : ದಾಖಲೆಗಳ ಅವಲೋಕನ

ತಾಲ್ಲೂಕು :
ಶಾಲೆ :

1. ಶಾಲೆಯ ಹೆಸರು : LPS / HPS ________________________________

2. ಮಕ್ಕಳ ಸಂಖ್ಯೆ : ಶಿಕ್ಷಕರ ಸಂಖ್ಯೆ :

3. ಬಹುಮುಖಿ ತರಬೇತಿ ಪಡೆದ ಶಿಕ್ಷಕರು : ಪಡೆಯದ ಶಿಕ್ಷಕರು :

4. ಬಹುಮುಖಿಯನ್ವಯ ತರಗತಿ ಹೊಂದಾಣಿಕೆ ಮಾಡಿಕೊಂಡಿರುತ್ತಾರೆಯೇ ? ಹೌದು/ಇಲ್ಲ

5. ಹೌದಾದಲ್ಲಿ ಯಾವ ಯಾವ ತರಗತಿ ಮಕ್ಕಳು ಒಟ್ಟಿಗೆ ಕುಳಿತಿರುತ್ತಾರೆ ?

   1. 2. 3. 4.

6. ವಾರ್ಷಿಕ ಸಾಮರ್ಥ್ಯ ಹೊಂದಾಣಿಕೆ ಮಾಡಿಕೊಂಡಿರುವ ಪಟ್ಟಿ ಲಭ್ಯವಿದೆಯೇ ? ಹೌದು/ಇಲ್ಲ

7. ಹೌದಾದಲ್ಲಿ ಸಾಮರ್ಥ್ಯಗಳು ಹೊಂದಾಣಿಕೆಗನುಗುಣವಾಗಿ ಸಮರ್ಪಕವಾಗಿ

   ಸಮಾನಾಂಶ ಹೊಂದಿವೆಯೇ ? ಹೌದು/ಇಲ್ಲ

8. ಬಹುಮುಖಿಯನ್ವಯ ವೇಳಾಪಟ್ಟಿ ತಯಾರಿಸಿಕೊಂಡಿರುತ್ತಾರೆಯೇ ? ಹೌದು/ಇಲ್ಲ

9. ಬಹುಮುಖಿಯನ್ವಯ ಪಾಠ ಯೋಜನೆ ತಯಾರಿಸಿಕೊಳ್ಳಲಾಗಿದೆಯೇ ? ಹೌದು/ಇಲ್ಲ

10. ಹೌದಾದಲ್ಲಿ ಪಾಠ ಯೋಜನೆ ಪುಸ್ತಕದಲ್ಲಿ ಎಷ್ಟು ಪಾಠಗಳನ್ನು ನಮೂದಿಸಿದೆ ? ಸಂಖ್ಯೆ : ____

    ಸಾಕಷ್ಟಿಲ್ಲ

11. ಬಹುಮುಖಿ ಕಲಿಸುವಿಕೆಗೆ ಬೋಧನೋಪಕರಣಗಳನ್ನು ತಯಾರಿಸಿ ಕೊಂಡಿರುತ್ತಾರೆಯೇ ?

    ಹೌದು/ಇಲ್ಲ

12. ಬಹುಮುಖಿಯನ್ವಯ ಕಲಿಕೋಪಕರಣಗಳನ್ನು ತಯಾರಿಸಿ ಕೊಂಡಿರುತ್ತಾರೆಯೇ ?ಹೌದು/ಇಲ್ಲ

13. ಪ್ರಗತಿ ತಃಖ್ತೆ ನಿರ್ವಹಿಸಿರುತ್ತಾರೆಯೇ ? ಹೌದು/ಇಲ್ಲ

14. ಪರಿಹಾರ ಬೋಧನಾ ತಃಖ್ತೆ ನಿರ್ವಹಿಸಿರುತ್ತಾರೆಯೇ ? ಹೌದು/ಇಲ್ಲ

## ಭಾಗ –2 ಪಾಠ ಅವಲೋಕನ

15. ವಿಷಯ ___________________ ಸಾಮರ್ಥ್ಯ ಹೊಂದಾಣಿಕೆ ಸರಿಯಿದೆ/ಇಲ್ಲ

16. ತರಗತಿ ಹೊಂದಾಣಿಕೆ ಸರಿಯಿದೆ/ಇಲ್ಲ

17. ಇತರೆ ತರಗತಿಗೆ ನೀಡಿದ ಪೂರಕ ಚಟುವಟಿಕೆ ಸಾಮರ್ಥ್ಯಕ್ಕೆ
ಸಮಂಜಸವೇ ? ಸರಿಯಿದೆ/ಇಲ್ಲ

18. ಇತರೆ ತರಗತಿಗೆ ನಿರ್ವಹಣೆಗೆ ಶಿಕ್ಷಕ ಬಳಸಿದ ವಿಧಾನ ಹಿರೇಮಣೆ/ಗುಂಪು ಕಲಿಕೆ/ಸ್ವಕಲಿಕೆ

19. ಇತರೆ ತರಗತಿ ನಿರ್ವಹಣೆಗೆ ಕಲಿಕೋಪಕರಣಗಳನ್ನು ಬಳಸಲಾಗಿತ್ತೇ ? ಹೌದು/ಇಲ್ಲ

20. ಹೌದಾದಲ್ಲಿ ಅವು ಹೆಚ್ಚುವಿರ ಕಲಿಕೆಗೆ ಸಹಾಯಕವಾಗಿದ್ದವೇ ? ಹೌದು / ಇಲ್ಲ

21. ನೇರ ಕಲಿಕೆಗೆ ಅಳವಡಿಸಿಕೊಂಡ ತರಗತಿಯ ನಿರ್ವಹಣೆ. ಸರಿಯಿದೆ/ಇಲ್ಲ

22. ಶಿಕ್ಷಕರು ಬೋಧನೋಪಕರಣಗಳನ್ನು ಬಳಸಿದರೇ ? ಹೌದು/ಇಲ್ಲ

23. ಹೌದಾದಲ್ಲಿ ಅವು ಸಾಮರ್ಥ್ಯಗಳಿಗೆ ಸಮಂಜಸವಾಗಿದ್ದವೇ ? ಹೌದು/ಇಲ್ಲ

24. ಸ್ಥಳ ನಿರ್ವಹಣೆ ಸೂಕ್ತವಾಗಿತ್ತೇ ? ಹೌದು/ಇಲ್ಲ

25. ಕಲಿಕೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ತೊಡಗಿಸಿ ಕೊಂಡಿದ್ದರೇ ? ಹೌದು/ಇಲ್ಲ

26. ಸಮಯ ಹಂಚಿಕೆ ಸಮರ್ಪಕವಾಗಿತ್ತೇ ? ಹೌದು/ಇಲ್ಲ

27. ಅವಲೋಕಿಸಿದ ತರಗತಿಯಲ್ಲಿ ಕಲಿಕೆ ಪರಿಣಾಮಕಾರಿಯಾಗಿತ್ತೇ ? ಹೌದು/ಇಲ್ಲ

## ಭಾಗ – 3 : ತರಬೇತಿ ಅನುಪಾಲನೆ

28. ಈ ವರ್ಷ ಇದುವರೆಗೆ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದವರು.
ಸಂಖ್ಯೆ ಬರೆಯಿರಿ. : DDPI / DIET _____, BEO / ECO ______, BRC ____, CRC ______

29. ಭೇಟಿ ನೀಡಿದ ಸಂಪನ್ಮೂಲ ವ್ಯಕ್ತಿಗಳು ಬಹುಮುಖಿ ತರಬೇತಿ ಅನುಷ್ಠಾನ ಅವಲೋಕಿಸುತ್ತಾರೆಯೇ?
ಹೌದು/ಇಲ್ಲ

30. ಹೌದಾದಲ್ಲಿ ನೀಡಿದ ಪ್ರಮುಖ ಸಲಹೆಗಳು :
1.
2.

## ಭಾಗ – 4 : ಶಿಕ್ಷಕರ / ಅವಲೋಕಿಸಿದವರ ಅಭಿಪ್ರಾಯ :

31. ಬಹುಮುಖಿ ತರಬೇತಿ ಅನುಷ್ಠಾನಗೊಳಿಸುವಲ್ಲಿ ತಮಗೆ ಇರುವ ತೊಡಕುಗಳೇನು ?
1.
2.

32. ಬಹುಮುಖಿ ತರಬೇತಿ ಉತ್ತಮವಾಗಿ ತರಗತಿಯಲ್ಲಿ ಅನುಷ್ಠಾನಗೊಳಿಸಲು ನಿಮ್ಮ ಸಲಹೆಗಳು ?
1.
2.

33. ಅವಲೋಕಿಸಿದ / ಭೇಟಿ ನೀಡಿದ ಅಧಿಕಾರಿ / ಸಂಪನ್ಮೂಲ ವ್ಯಕ್ತಿಯ ಒಟ್ಟಾರೆ ಅಭಿಪ್ರಾಯ :
(ಮಕ್ಕಳ ಕಲಿಕೆಯ ಸಫಲತೆಯನ್ನೂ ನಮೂದಿಸಿ)

ಕರ್ನಾಟಕ ಸರ್ಕಾರ – ಸಾರ್ವಜನಿಕ ಶಿಕ್ಷಣ ಇಲಾಖೆ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.

## ಸಂಶೋಧನೆ ಮೌಲ್ಯಮಾಪನ ನಿರ್ವಹಣೆ ಮೇಲುಸ್ತುವಾರಿ ಮಧ್ಯವರ್ತನದಡಿಯಲ್ಲಿ

**ಶಿವಮೊಗ್ಗ ತಾ॥ ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ಆಯ್ದ ಸರ್ಕಾರಿ ಶಾಲೆಗಳ ಬಹುತರಗತಿ ನಿರ್ವಹಣಾ ಕೌಶಲಗಳ ವೀಡಿಯೋ ಚಿತ್ರೀಕರಣ.**



## ಕೃತಜ್ಞತೆಗಳು :

**ಬಹುದರ್ಶಿನಿ ಚಿತ್ರೀಕರಣದಲ್ಲಿ ಭಾಗವಹಿಸಿದ ಶಾಲೆಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು**

1. ಹೆಚ್.ಪಿ.ಎಸ್. ತಡಗಳಲೆ ಬಡಾವಣೆ, ಸಾಗರ ತಾಲ್ಲೂಕು.

   ಶರಾವತಿ ಬಾಯಿ

2. ಎಲ್.ಪಿ.ಎಸ್. ಕಾಚೀಕೆರೆ ಕ್ಯಾಂಪ್, ಶಿವಮೊಗ್ಗ ತಾಲ್ಲೂಕು.

   ವೈ.ಎನ್. ಲಲಿತಾ, ಚಂದ್ರಾನಾಯ್ಕ

3. ಹೆಚ್.ಪಿ.ಎಸ್. ಬಿಲ್ಗುಣಿ, ಶಿವಮೊಗ್ಗ ತಾಲ್ಲೂಕು.

   ಆನಂದಪ್ಪ ಸಿ.ಆರ್.  ರತ್ನಮ್ಮ, ವತ್ಸಲಾ

4. ಹೆಚ್.ಪಿ.ಎಸ್. ಕಾನಲೆ, ಸಾಗರ ತಾಲ್ಲೂಕು.

   ಕೆ. ಎಸ್. ಚಿದಂಬರರಾವ್

5. ಹೆಚ್.ಪಿ.ಎಸ್. ಮಳಲೀಕೊಪ್ಪ, ಶಿವಮೊಗ್ಗ ತಾಲ್ಲೂಕು ಮೀರಾಬಾಯಿ

## ಪೀಠಿಕೆ :

ಬಹುತರಗತಿಗಳ ನಿರ್ವಹಣೆಗೆ ಬಹುಮುಖಿ-1 ತರಬೇತಿಯನ್ನು ಕಿಪ್ರಾಶಾಲೆ / ಹಿಪ್ರಾಶಾಲೆ ಶಿಕ್ಷಕರಿಗೆ ನೀಡಲಾಗಿದೆ ಆದರೂ ಸಹ ಕಾರ್ಯಕ್ಷೇತ್ರದಲ್ಲಿ ಹಲವಾರು ತೊಡಕುಗಳನ್ನು ತಮ್ಮದೇ ವಿಭಿನ್ನ ರೀತಿಯಲ್ಲಿ ಪರಿಹಾರ ಕಂಡು ಕೊಂಡಿರುವ ಶಿಕ್ಷಕರಿದ್ದು ಅವರ ಯಶೋಗಾಥೆಗಳು ಇತರರಿಗೆ ಪ್ರೇರಣೆಯಾಗಲಿದೆ ಈ ನಿಟ್ಟಿನಲ್ಲಿ ಬಹುಮುಖಿ_1 ತರಬೇತಿ ಮೌಲ್ಯ ಮಾಪನದಲ್ಲಿ ಶಿಕ್ಷಕರು ನೀಡಿದ ತೊಡಕುಗಳು ಹಾಗೂ ಸಂಪನ್ಮೂಲ ಶಿಕ್ಷಕರ ತಂಡದಲ್ಲಿ ಚರ್ಚಿಸಿ ನಿರ್ಧರಿಸಿದ ಅಗತ್ಯ ತಂತ್ರ ವಿಧಾನಗಳನ್ನು ದೃಶ್ಯ ಮಾಧ್ಯಮದಲ್ಲಿ ಸೆರೆ ಹಿಡಿಯಲಾಗಿದೆ ಹಾಗೂ ಮುಖಾಮುಖಿ ಸಂವಾದದಲ್ಲಿ ಇದನ್ನು ಬಳಸಿಕೊಳ್ಳಲಾಗಿದೆ.

## **ಉದ್ದೇಶಗಳು** :

1. ಅಧ್ಯಯನದಲ್ಲಿ ಗುರುತಿಸಿದ ಶಿಕ್ಷಕರುಗಳ ತೊಡಕುಗಳಿಗೆ ಪರಿಹಾರವನ್ನು ಸ್ರಚಿಸುವುದು
2. ಯಶಸ್ವಿಯಾಗಿ ಬಹುತರಗತಿಗಳನ್ನು ನಿರ್ವಹಿಸುತ್ತಿರುವ ಶಿಕ್ಷಕರ ಬೋಧನಾ ತಂತ್ರ ವಿಧಾನಗಳನ್ನು ದೃಶ್ಯ ಮಾಧ್ಯಮದಲ್ಲಿ ಸೆರೆ ಹಿಡಿಯುವುದು.
3. ಶಿಕ್ಷಕರ ತೊಡಕುಗಳನ್ನು ನಿವಾರಿಸಲು ಮುಖಾಮುಖಿಯಲ್ಲಿ ಅನುಭವ ಹಚಿಚಿಕೆಗೆ ಅಗತ್ಯ ವಿಧಾನ ತಂತ್ರಗಳನ್ನು ರೂಪಿಸುವುದು.

## **ಸಂಕ್ಷಿಪ್ತ ಸಾಹಿತ್ಯ** :

ವಿಡಿಯೋ ಚಿತ್ರೀಕರಣದಲ್ಲಿರುವ ಶಾಲೆಗಳು - ಸಾಮರ್ಥ್ಯಗಳು / ಕಲಿಕಾಂಶಗಳು ಬೋಧನಾ ತಂತ್ರ ವಿಧಾನಗಳು ವಿವರ ಈ ಕೆಳಕಂಡಂತಿದೆ.

## **ವೀಡಿಯೋ ಚಿತ್ರೀಕರಣದಲ್ಲಿ ಭಾಗವಹಿಸಿದ ಶಾಲೆಗಳು ಮತ್ತು ಶಿಕ್ಷಕರ ವಿವರ**

1. ಕಾಚೀಕೆರೆ ಕ್ಯಾಪ್, ಶಿವಮೊಗ್ಗ ತಾಲ್ಲೂಕು, ವೈ.ಎನ್. ಲಲಿತಾ ಮತ್ತು ಚಂದ್ರಾನಾಯ್ಕ
2. ಬಿಲ್ಲುಣಿ, ಶಿವಮೊಗ್ಗ ತಾಲ್ಲೂಕು, ಆನಂದಪ್ಪ ಸಿ.ಆರ್. ರತ್ನಮ್ಮ, ವತ್ಸಲಾ
3. ತಡಗಳಲೆ ಬಡಾವಣೆ, ತಾಳಗುಪ್ಪ ಕ್ಲಸ್ಟರ್, ಸಾಗರ ತಾಲ್ಲೂಕು ಶರಾವತಿ ಬಾಯಿ,
4. ಕಾನಲೆ, ತಾಳಗುಪ್ಪ ಕ್ಲಸ್ಟರ್, ಸಾಗರ ತಾಲ್ಲೂಕು ಚಿದಾನಂದರಾವ್

# ವೀಡಿಯೋ ಚಿತ್ರೀಕರಣ ಮಾಡಿದ ವಿಷಯಗಳ ವಿವರ

## 1. ಎಲ್.ಪಿ.ಎಸ್. ಕಾಚಿಕೆರೆ ಕ್ಯಾಂಪ್, ಶಿವಮೊಗ್ಗ ತಾಲ್ಲೂಕು

1. ಪ್ರಾರ್ಥನೆ
2. ಭೂಸ್ವರೂಪ - ಮೌಲ್ಯಮಾಪನ ಚಟುವಟಿಕೆ - 3 & 4ನೇ ತರಗತಿ

   ಬಳಕೆ ಚಟುವಟಿಕೆಯಲ್ಲಿ ಮಾನಗಳ ಪರಿಚಯ

   ಸಹ ಕಲಿಕೆ - ಮಿಲಿ. ಲೀ. ನಿಮಿಷ, ಲೀಟರ್. ಕಿ.ಲೋ.
3. ನಿಯಮ ಪಾಲನೆ / ಕಲಿಕಾ ಕಾರ್ನರ್‌ಗೆ ಇಡುವಿಕೆ

   ಗುಂಪಾಗಿ ಕೂರುವಿಕೆ

   ಇಬ್ಬರು ಶಿಕ್ಷಕರು ಒಬ್ಬರು ಅಕ್ಷರ ದಾಸೋಹ / ರಜೆ / ಅವಧಿಯಲ್ಲಿ ನಿರ್ವಹಣೆ ಬಗೆ
4. ತರಗತಿ ಆರಂಭ ಸೂಚನೆ

   ಅಭಿನಯ ಗೀತೆ - ಆನೆ ಬಂತೊಂದಾನೆ ಬಂತು

   1, 2, 3, 4, 5 - ತರಗತಿಗಳು

   ಕಾಗುಣಿತ

   ಈ ಶಾಲೆಯ ದೈನಂದಿನ ಚಟುವಟಿಕೆ ಹೀಗಿದೆ - ಇದು ಸಹ ಕಲಿಕೆ

### ಪಾಠ ಯೋಜನೆ : ತರಗತಿ ನಿರ್ವಹಣೆ

1. ಪೂರ್ವ ಸಿ. ಚ : ನಂತರ 3 ಲೀಡರ್ಸ್ ಕಲಿಕಾ ಕಾರ್ನರ್‌ನಿಂದ ತಮ್ಮ TLM ಕೊಂಡೊಯ್ಯುವರು. ನಂತರ ಶಿಕ್ಷಕರ ಸೂಚನೆ ನಾಳೆ ಚಟುವಟಿಕೆಗೆ ಇಂದೇ ಕಾರ್ನರ್‌ನಲ್ಲಿ ಇಡುವರು.
2. ಅಳತೆಯ ಮಾನಗಳ ಪರಿಚಯ : 3 & 4, 5ನೇ ತರಗತಿ
3. ಬಹುಹಂತದ ಕಲಿಕೆ - ಕಲಿಕೆಯಲ್ಲಿ ಹಿಂದೆ / ಮಧ್ಯೆ / ಮುಂದೆ ಇರುವ ಮಕ್ಕಳ ಕಲಿಕೆ ಸಹಾಯ

   ಕಲಿಕಾಂಶ : ಅಕ್ಷಾಂಶಗಳ ಪರಿಚಯ : 4 & 5ನೇ ತರಗತಿ

   ಪರಿಸರ ಅಧ್ಯಯನ - ಗೋಳದಲ್ಲಿ - ಅಕ್ಷಾಂಶ ಭೂ ಮಧ್ಯೆ ರೇಖೆ ಗುರುತಿಸುವುದು

   ಬಳಕೆ ಚಟುವಟಿಕೆ

   ಸ್ಥಳೀಯ ಲಭ್ಯ ವಸ್ತುವನ್ನು ಬಳಸಿ ಅಕ್ಷಾಂಶದ ಪರಿಕಲ್ಪನೆ ಬಳಕೆ ಹಂತದಲ್ಲಿ
4. ಮೌಖಿಕ ಲೆಕ್ಕ - 1ನೇ ತರಗತಿ ಸಂಕಲನ

   ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವೈಯಕ್ತಿಕ ಗಮನ

   ಸಮ ಸಂಖ್ಯೆ ಹೇಳುವುದು - 2ನೇ

   ಸಂಖ್ಯೆ - ಸಮ / ಬೆಸ ವಿಂಗಡನೆ - 3ನೇ

   ಸಂಕಲನ
5. ಕಾಡು / ಅರಣ್ಯ ಪರಿಕಲ್ಪನೆ / ಕಾಡು ಪ್ರಾಣಿ

   ಸಾಕು ಪ್ರಾಣಿ/ಜಲಚರ ಪರಿಸರ ಅಧ್ಯಯನದ ಹಲವಾರು ಸಾಮರ್ಥ್ಯಗಳನ್ನು ಕಲಿಸಲು ಬಳಸಬಹುದಾದ ವಿಭಿನ್ನ ಪರಿಕಲ್ಪನೆ
6. ಒಂದೇ ಟಿ ಎಲ್ ಎಂ ನಲ್ಲಿ ಮೂಡಿಸಬಹುದಾದ ವಿಭಿನ್ನ ಪರಿಕಲ್ಪನೆಗಳು

ಭೂಗೋಳ ಭೂ ಸ್ವರೂಪಗಳು

ಮೌಲ್ಯ ಮಾಪನ ಮತ್ತು ಬಳಕೆ ಹಂತ

ಸ್ವ ಕಲಿಕೆ ಮತ್ತು ಸಹ ಕಲಿಕೆಗೆ ನೆರವಾಗುವಂತಹ ಎಸ್ ಎಲ್ ಎಂ ಗಳು ಈ ಕೆಳಕಂಡಂತೆ ಇದೆ.

7. ಕನಿಷ್ಟ, ಗರಿಷ್ಟ ಸಂಖ್ಯೆ ಮಾಡು - ಮಕ್ಕಳಿಂದ ಆಟ
8. ಭಿನ್ನರಾಶಿ -
9. ಸ್ಥಾನ ಬೆಲೆ - ಮೌಲ್ಯಮಾಪನ ಅಭ್ಯಾಸ / ಬಳಕೆ ಚಟುವಟಿಕೆ
10. ಸೂತ್ರ ಹಾಕಿ - ರೇಖಾಗಣಿತ ಲೆಕ್ಕ ಮೌಖಿಕ ಮೌಲ್ಯಮಾಪನ
    ಲಿಖಿತ ಮೌಲ್ಯಮಾಪನ
11. ಕನ್ನಡ - ಅಕ್ಷರ - ಒತ್ತಾಕ್ಷರದ ದಾಳ ಆಟ
12. ಮಕ್ಕಳೊಂದಿಗೆ ಮಾತು -
13. 1ನೇ ತರಗತಿ - ಪತ್ರಿಕೆ ಬರಹ ಓದಿಸುವುದು
14. ಸಂಖ್ಯೆ ಜೋಡಿಸು / ಏರಿಕೆ & ಇಳಿಕೆ
15. ಇಂಗ್ಲೀಷ್ ಕಲಿಕೆಗೆ ಸಹಾಯಕವಾಗುವ ದಾಳದ ಆಟ
16. ದಶಾಂಶ / ಶತಾಂಶ ಪರಿಕಲ್ಪನೆ
17. ಅಪವರ್ತ್ಯ / ಅಪವರ್ತನಗಳು
18. ಮಿಶ್ರ / ವಿಷಮ / ಸಮ ಭಿನ್ನರಾಶಿ
19. ಅಶೋಕ - ಕಳಿಂಗ ಯುದ್ಧ ಮನ ಪರಿವರ್ತನೆ
20. ಆಲ್ಬಂ - ಸಮಾಜ ವಿಜ್ಞಾನ
21. ಕಲಿಕಾ ಚಪ್ಪರ
22. ಅಭ್ಯಾಸದ ಕಾರ್ಡುಗಳು
23. ಸರ್ಕಾರದ / ಇಲಾಖಾ / ಯೋಜನೆಗಳ ಪರಿಚಯ
24. ಕ್ಯಾಸೆಟ್ ಕೇಳಿಸುವಿಕೆ - ಎಲ್ಲಾ ಕ್ಯಾಸೆಟ್ ಛಟುಅಲುಚಂ
25. ಕಾಗುಣಿತ - ಪದ / ಅಕ್ಷರ ಗುರುತಿಸು / ಹೇಳು
26. ಭಾಷಾ ಸಮಸ್ಯೆ
27. ಕವಿ - ಕಾವ್ಯ ಪರಿಚಯ
28. ಸ್ಟಾಂಪ್ ಸಂಗ್ರಹ
29. ಮಕ್ಕಳು ತಯಾರಿಸಿದ ಯೋಜನೆಗಳು / ಘತಾಷದ - ತಿಂಗಳು
30. ಕಥಾ ಪೆಟ್ಟಿಗೆ
31. ಸಾಂಸ್ಕೃತಿಕ ಕಾರ್ಯಕ್ರಮ
32. ಪದಬಂಧ
33. ರಂಗಕಲೆ - ಬಳಕೆ - ಪುಣ್ಯಕೋಟಿ
34. ತ್ರಿಜ್ಯ / ವ್ಯಾಸ ಪರಿಧಿ ಕಲ್ಪನೆ / ಆಕೃತಿ ಪರಿಚಯ
    ಕಲಿಕಾ ಕಾರ್ನರ್ / ಕಲಿಕಾ ಚಪ್ಪರ ಬಹುಮುಖಿಯ ವಸ್ತು ಒಂದು - ಕಲಿಕೆ ಹಲವು

**ಸಮಾನ ವಯಸ್ಕರ ಗುಂಪು / ಮುಂದುವರಿದ ವಿದ್ಯಾರ್ಥಿಗಳಿಂದ ನೆರವು**

1. ಬರವಣಿಗೆಗೆ ಸಹಾಯ
2. ಪದಗಳ ಬರವಣಿಗೆಗೆ ಉತ್ತಲೇಖನ ನೀಡಿಕೆ
3. ಆಟ ಆಡಿಸಲು ಸೂಚನೆ ನೀಡುವುದು
4. ಓದಲು, ಕಂಠಪಾಠ ಮಾಡುವ ಪದ್ಯ ಹೇಳಿಸಲು, ಸರಳ ಕ್ರಿಯೆ
5. TLM ಗುಂಪಿಗೆ ಹಂಚುವಿಕೆ

6. ಗುಂಪಿನ ಕಾರ್ಯದ ಸೂಚನೆ ನೀಡುವುದು

**ಸಾಮರ್ಥ್ಯ ಹೊಂದಾಣಿಕೆ ಶಿಕ್ಷಕರ ಶ್ರಮ ಕಡಿಮೆ ಮಾಡಿಸುತ್ತದೆ.**

1. ಸ್ಥಳ ನಿರ್ವಹಣೆ
2. ಗುಂಪು ನಿರ್ವಹಣೆ
3. ಕಲಿಕಾ ಚಪ್ಪರ / ಕಲಿಕಾ ಕಾರ್ನರ್ ಪರಿಚಯ

**ಕಾಗುಣಿತ ಮುಂದುವರಿಕೆ - ಕಾಗುಣಿತ ಹೇಳಿಸಿ ಪದ**

ಭಾಷಾ ಸಮಸ್ಯೆ ಪರಿಹಾರ

ಪದಬಂಧ - ತಲ್ಲಿ, ಕನ್ನಡ ಪರಿಚಯ

1, 2, - ತರಗತಿ ಬೇರ್ಪಡಿಕೆ - ಚಂದ್ರಾನಾಯ್ಕ ಒಬ್ಬ ಶಿಕ್ಷಕರಿಗೆ

3, 4, 5ನೇ ತರಗತಿ - ವೈ.ಎಲ್. ನಿರ್ವಹಣೆ

3, 4, 5ನೇ ತರಗತಿ - ತರಗತಿ ನಿರ್ವಹಣೆ ಗುಂಪು ನಿರ್ವಹಣೆ, ಸ್ಥಳ ನಿರ್ವಹಣೆ ಚಟುವಟಿಕೆಗಳು

**ಸಾಮರ್ಥ್ಯ ಹೊಂದಾಣಿಕೆ**

3ನೇ ತರಗತಿ - ಕಥೆ ಮತ್ತು ಮುದ್ರಿತ ಅಕ್ಷರ ನಕಲು ಮತ್ತು ಓದುವುದು

4ನೇ ತರಗತಿ - ವಿನೋದ ಚಿತ್ರ ಸರಣಿ & ಭಿತ್ತಿ ಪತ್ತ ಓದುವುದು

5ನೇ ತರಗತಿ - ಮಕ್ಕಳ ನಿಯತಕಾಲಿಕೆ ಓದುವುದು

ತರಗತಿ ನಿರ್ವಹಣೆ / ಕಪ್ಪು ಹಲಗೆ ಬಳಕೆ

ಮೌಖಿಕ ಮೌಲ್ಯಮಾಪನ : ಗಣಿತ

1ನೇ ತರಗತಿ ಮನಸ್ಸಿನಲ್ಲೇ ಲೆಕ್ಕ

ಕನ್ನಡ ಮೌಖಿಕ ಮೌಲ್ಯಮಾಪನ

1, 2, 3 ಆಲಿಸು / ಹಾಡಿಸು ಮುಂತಾದವು

ಪದ ಸಾಮ್ಯತೆಯನ್ನು ಅರಿತು ಸ್ಪಷ್ಟ ಉಚ್ಚಾರಣೆ ಬಳಕೆ

## ಹೆಚ್.ಪಿ.ಎಸ್. ಮಳಲೀಕೊಪ್ಪ

ಕಡಿಮೆ ಖರ್ಚಿನ ಕಲಿಕೋಪಕರಣಗಳು, ಕನ್ನಡ, ಗಣಿತ, ಸಾಮಾಜಿಕ ಉಪಯುಕ್ತ ಉತ್ಪಾಧನಾ ಕಾರ್ಯದಡಿಯಲ್ಲಿ ಹಲವು ಟಿ.ಎಲ್.ಎಂ.ಗಳನ್ನು ವೀಡಿಯೋ ಚಿತ್ರೀಕರಿಸಲಾಗಿದೆ.

## 2. ಹೆಚ್.ಪಿ.ಎಸ್. ಬಿಲ್ಗುಣೆ, ಶಿವಮೊಗ್ಗ ತಾಲ್ಲೂಕು.

ತರಗತಿ : 5 ವಿಷಯ : ಗಣಿತ ಕಲಿಕಾಂಶ / ಸಾಮರ್ಥ್ಯ :

1. ಶುದ್ಧ ಭಿನ್ನರಾಶಿ - ಮಿಶ್ರ ಭಿನ್ನರಾಶಿ - ವಿಷಮ ಭಿನ್ನರಾಶಿ

ಹಂತ : ಅಭ್ಯಾಸ / ಮೌಲ್ಯಮಾಪನ

2. ನಲಿ - ಕಲಿ (1 ಮತ್ತು 2ನೇ ತರಗತಿ)

ಆಶಾ ಆಟ, ಹುಣಸೇಬೀಜವನ್ನು ಸಂಖ್ಯೆಗಳ ಮೇಲೆ ಇಡುವುದು.

3. ಗುಣಿತಾಕ್ಷರಗಳ ಜಾರುಪಟ್ಟಿ (1 ಮತ್ತು 2ನೇ ತರಗತಿ)

4. ಸನ್ನಿವೇಶ ರಚನೆ (1 ಮತ್ತು 2ನೇ ತರಗತಿ)

5. ವರ್ಣಮಾಲೆ ಅಕ್ಷರಗಳನ್ನು ಬಿಡಿಯಾಗಿ ಗುರ್ತಿಸಿ ನಂತರ ಅವುಗಳಿಂದ ಸರಳ ಪದಗಳ ರಚನೆ (1ನೇ ತರಗತಿ)

6. ಗಣಿತದ ಸೂತ್ರಗಳು (7ನೇ ತರಗತಿ) (ಮಾದರಿಗಳ ಸಹಾಯದಿಂದ ಸೂತ್ರಗಳ ಸರಳೀಕರಣ)

   1. $(x + a)(x + b) = x^2 + x(a + b) + ab$
   2. $(a + b)^2 = a^2 + 2ab + b^2$
   3. $(a - b)^2 = a^2 - 2ab + b^2$
   4. ವೃತ್ತದ ವಿಸ್ತೀರ್ಣವನ್ನು ಕಂಡು ಹಿಡಿಯುವ ಸೂತ್ರ $A = \pi r^2$
   5. ವೃತ್ತದ ಪರಿಧಿಯನ್ನು ಕಂಡು ಹಿಡಿಯುವ ಸೂತ್ರ $C = 2\pi r$
   6. ಚೌಕ ಘನದ ಘನಫಲ $= a^3$
   7. ಆಯತ ಘನದ ಘನಫಲ $= l \times b \times h$
   8. ತ್ರಿಭುಜದ ವಿಸ್ತೀರ್ಣ $= 1/2 \times l \times h$
   9. $(a + b)(a - b) = a^2 - b^2$

7. ಮಾದರಿ ಸಹಾಯದಿಂದ ವಸ್ತು ಒಂದು ಕಲಿಕೆ ಹಲವು (4, 5, 6 ಮತ್ತು 7ನೇ ತರಗತಿ)

ಹಗಲು - ರಾತ್ರಿ, ಸೂರ್ಯ ಗ್ರಹಣ, ಚಂದ್ರ ಗ್ರಹಣ, ಬೆಳಕು ಸರಳ ರೇಖೆಯಲ್ಲಿ ಪ್ರಸಾರವಾಗುತ್ತದೆ, ಭೂಮಿಯ ವಾರ್ಷಿಕ ಚಲನೆ, ಸಂಖ್ಯಾರೇಖೆ ಸಹಾಯದಿಂದ ದೊಡ್ಡದು, ಚಿಕ್ಕದು ಎಂದು ತೋರಿಸುವುದು. (ಮೇಲಿನ ಎಲ್ಲಾ ಚಟುವಟಿಕೆಗಳನ್ನು ಒಂದೇ ಮಾದರಿ ಬಳಸಿ ತೋರಿಸಿರುವುದು)

8. ರೋಮನ್ ಸಂಖ್ಯಾ ಮೌಲ್ಯಮಾಪನ (5 ಮತ್ತು 6ನೇ ತರಗತಿ)

ರೋಮನ್ ಸಂಖ್ಯೆಗಳ ಕಾರ್ಡ್‌ಗಳನ್ನು ಬಳಸಿ ಹೊರಾಂಗಣದಲ್ಲಿ ಚಟುವಟಿಕೆಗಳ ಮೂಲಕ ಮೌಲ್ಯಮಾಪನ ಮಾಡುವುದು.

9. ಬ್ಯಾಂಕಿನ ಸನ್ನಿವೇಶದ ಮೂಲಕ ಸರಳಬಡ್ಡಿ, ಅಸಲು, ಬಡ್ಡಿದರ, ಅವಧಿ ಕಂಡುಹಿಡಿಯುವ ಚಟುವಟಿಕೆ (7ನೇ ತರಗತಿ)

10. ಉದ್ದದ ಮೂಲಮಾನ, ಘಟಕ ಪರೀಕ್ಷೆ (3 ಮತ್ತು 4ನೇ ತರಗತಿ)

ಗಾತ್ರದ ಮೂಲಮಾನ, ತೂಕದ ಮೂಲಮಾನಕ್ಕೆ ಸಂಬಂಧಿಸಿದಂತೆ ಮಿಂಚುಪಟ್ಟಿಗಳನ್ನು ಬಳಸಿ 3 ಮೂಲಮಾನಗಳಿಗೂ ಸಂಬಂದಿಸಿದಂತೆ ಒಟ್ಟಿಗೆ ಮೌಲ್ಯಮಾಪನ ಮಾಡುವ ಚಟುವಟಿಕೆ.

11. ದಶಮಾಂಶ ಸಂಖ್ಯೆಗಳನ್ನು ಓದುವುದು, ಸ್ಥಾನ ಮತ್ತು ಸ್ಥಾನ ಬೆಲೆಯನ್ನು ಗುರುತಿಸುವುದು. (3 ಮತ್ತು 4ನೇ ತರಗತಿ)

ಸ್ಥಾನ ಬೆಲೆ ಕೋಷ್ಟಕದ ಮಾದರಿ ನೆರವಿನಿಂದ ಸಂಖ್ಯಾ ಕಾರ್ಡ್ ಬಳಸಿ ಎಲ್ಲಾ ಮಕ್ಕಳಿಂದ ದಶಮಾಂಶ ಸಂಖ್ಯೆಗಳನ್ನು ಹೇಳಿಸುವುದು ಮತ್ತು ಸ್ಥಾನ, ಸ್ಥಾನ ಬೆಲೆಗಳನ್ನು ಹೇಳಿಸುವುದು.

12. ಸಂಖ್ಯೆಗಳು ಮತ್ತು ಸಂಖ್ಯಾ ಸೂಚಿಗಳು (3 ರಿಂದ 6ನೇ ತರಗತಿ)

ವಿವಿಧ ಅಂಕೆಯ ಕಾರ್ಡ್‌ಗಳನ್ನು ಬೇರೆ ಬೇರೆ ಸ್ಥಾನಗಳಲ್ಲಿ ಅದಲು ಬದಲು ಮಾಡುತ್ತಾ, ಸಂಖ್ಯೆಗಳನ್ನು ಓದಿಸುವುದು ಮತ್ತು ಸ್ಥಾನ ಬೆಲೆ ಎಣಿಸುವ ಚಟುವಟಿಕೆ.

13. ಬೀಜೋಕ್ತಿಗಳ ವಿಂಗಡಣೆ : (5 ಮತ್ತು 6ನೇ ತರಗತಿ)

ವಿವಿಧ ಬೀಜೋಕ್ತಿಗಳನ್ನುಳ್ಳ ಮಿಂಚುಪಟ್ಟಿಗಳ ನೆರವಿನಿಂದ ಏಕಪದೋಕ್ತಿ, ದ್ವಿಪದೋಕ್ತಿ, ತ್ರಿಪದೋಕ್ತಿ ಹಾಗೂ ಬಹುಪದೋಕ್ತಿಗಳನ್ನು ವಿಂಗಡಿಸುವ ಚಟುವಟಿಕೆ.

## 3. **ಹೆಚ್.ಪಿ.ಎಸ್. ತಡಗಳಲೆ ಬಡಾವಣೆ, ಸಾಗರ ತಾಲ್ಲೂಕು.**

ಶಿಕ್ಷಣದಲ್ಲಿ ಸಂಗೀತ ಮತ್ತು ನೃತ್ಯವನ್ನು ಬಳಸಿ ತರಗತಿ ಬೋಧನೆಯಲ್ಲಿ ಕ್ಲಿಷ್ಟ ಪರಿಕಲ್ಪನೆಗಳನ್ನು ಸರಳೀಕರಿಸುವ ವಿನೂತನ ಪ್ರಯೋಗವನ್ನು ಈ ಶಾಲೆಯ ಶಿಕ್ಷಕಿಯಾದ ಶ್ರೀಮತಿ ಶರಾವತಿ ಬಾಯಿಯವರು ಮಾಡಿದ್ದಾರೆ.

ಮಕ್ಕಳು ಸಂತಸದಿಂದ ಸಾಮರ್ಥ್ಯಗಳನ್ನು ಪಾಠದ ಹೆಸರು, ಕಲಿಕಾಂಶವನ್ನು ತಿಳಿಸುತ್ತಿದ್ದರು. ಈ ಮಾದರಿ ಚಟುವಟಿಕೆಗಳು ಸಂತಸ ಕಲಿಕೆಗೆ ಚಾಲನೆ ನೀಡುವುದಲ್ಲದೆ ಶಾಲೆಗಳನ್ನು ಆಕರ್ಷಕ ಕೇಂದ್ರವನ್ನಾಗಿಸುತ್ತವೆ. ಅಲ್ಲದೆ ಮಕ್ಕಳ ಹಾಜರಾತಿ ಕೊರತೆಯನ್ನು ನೀಗಿಸುತ್ತದೆ.

## 1. ಕ್ಲಿಷ್ಟ ಪರಿಕಲ್ಪನೆಗಳು ಹಾಡಿನ ಮೂಲಕ ನೃತ್ಯ ಸಂಯೋಜನೆ ಮಾಡಿರುವ ಸಾಮರ್ಥ್ಯಗಳ ವಿವರ

1. ಅಕ್ಷಾಂಶ ರೇಖಾಂಶ
2. ಗಣಿತದ ಲಾಭ ನಷ್ಟ ಸೂತ್ರಗಳು
3. ಒತ್ತಕ್ಷರ
4. ಕಾಲಗಳು
5. ಭಾರತದ ಮೇಲ್ಮೈ ಲಕ್ಷಣಗಳು
6. ಗಾಳಿ
7. ಗುಣಾಕಾರ
8. ಸಂಕಲನ / ವ್ಯವಕಲನ
9. ಸೊನ್ನೆ ಪರಿಕಲ್ಪನೆ ಮುಂತಾದವು.

ಹೀಗೆ ಒಟ್ಟು 45 ಸಾಮರ್ಥ್ಯಗಳಿಗೆ ಹಾಡನ್ನು ರಚಿಸಿರುತ್ತಾರೆ. ಅವುಗಳಲ್ಲಿ ಗೋಳಖಂಡ, ಸಾಗರ, ಈ ಸಾಮರ್ಥ್ಯಗಳನ್ನು ಹಾಗೂ ಲಾಭ ನಷ್ಟ ಸೂತ್ರದ ಹಾಡಿನ ನೃತ್ಯ ಸಂಯೋಜನೆಯನ್ನು ವಿಡಿಯೋ ಚಿತ್ರೀಕರಣಕ್ಕೆ ಬಳಸಿಕೊಳ್ಳಲಾಗಿದೆ.

## ಸೃಜನಾಶೀಲ ವಿದ್ಯಾರ್ಥಿಗಳಿಗೆ ಕಲಿಕಾ ಪ್ಯಾಕೇಜ್

ವಿಷಯ : ಗಣಿತ ಸಂಪನ್ಮೂಲ ವ್ಯಕ್ತಿಗಳು : ಕೆ.ಎಸ್. ಚಿದಂಬರರಾವ್

ಗಣಿತವನ್ನು ಸಂತಸದಿಂದ ಕಲಿಯಲು ಸೃಜನಾಶೀಲ ವಿದ್ಯಾರ್ಥಿಗಳಿಗೆ ಸೂತ್ರಗಳು, ಸಮೀಕರಣಗಳು, ವಿಭಿನ್ನ ಲೆಕ್ಕಗಳು, ಒಗಟುಗಳು, ಮುಂತಾದವನ್ನು ಚಿತ್ರೀಕರಿಸಲಾಗಿದೆ.

# ಹಂತ - 3

**ಶಿವಮೊಗ್ಗ ತಾ|| ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ಆಯ್ದ ಸರ್ಕಾರಿ ಶಾಲೆಯ ಶಿಕ್ಷಕರುಗಳಿಗೆ ಮುಖಾಮುಖಿ**

## ಪ್ರಾಯೋಗಾತ್ಮಕ
## ಬಹು ತರಗತಿ ನಿರ್ವಹಣಾ ಕೌಶಲಗಳ
## ಸಂವಾದ ಕಾರ್ಯಾಗಾರ:

ಚಿಲಕಾದ್ರಿ ಹಳ್ಳಿ ಕ್ಲಸ್ಟರ್‌ನ ಆಯ್ದ ಸರ್ಕಾರಿ ಶಾಲೆಗಳಲ್ಲಿ ಬಹುಮುಖಿ -1 ತರಬೇತಿಯ ಅನುಷ್ಠಾನ ಮೌಲ್ಯಮಾಪನವನ್ನು ಕೈಗೊಂಡಾಗ ಶಿಕ್ಷಕರು ಗುರುತಿಸಿದ ತೊಡಕುಗಳನ್ನು ನಿವಾರಿಸುವ ಪ್ರಯತ್ನವನ್ನು ಬಹುದರ್ಶಿನಿ ವೀಡಿಯೋ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಯಿತು. ಅಲ್ಲದೆ ಶಿಕ್ಷಕರ ಆತ್ಮಾವಲೋಕನ ಶಾಲಾ ಸ್ಥಳೀಯ ಸಮಸ್ಯೆಗಳು ಅವುಗಳಿಗೆ ಪರಿಹಾರ ಅದರ ಜೊತೆಗೆ ಮುಂದಿನ ಶೈಕ್ಷಣಿಕ ವರ್ಷಕ್ಕೆ ವಾರ್ಷಿಕ ಕ್ರಿಯಾ ಯೋಜನೆ ಶಿಕ್ಷಕರಲ್ಲಿ ವಿಷಯ ಹಂಚಿಕೆ, ವೇಳಾಪಟ್ಟಿ ತಯಾರಿಕೆ ಮುಂತಾದ ವಿಷಯಗಳನ್ನು ಸಂವಾದ ಮಾಡಲು ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಕರೊಂದಿಗೆ ಪ್ರಯೋಗಾತ್ಮಕ ಮುಖಾಮುಖಿ ಕಾರ್ಯಾಗಾರವನ್ನು ದಿನಾಂಕ : 14-4-2007 ಹಾಗೂ 15-4-2007ರಂದು 2 ದಿನಗಳಿಗೆ ಹಮ್ಮಿಕೊಳ್ಳಲಾಗಿತ್ತು.

**ಉದ್ದೇಶಗಳು** :

1. ಬಹುಮುಖಿ-1 ತರಬೇತಿ ಮೌಲ್ಯಮಾಪನ ಹಾಗೂ ಶಿಕ್ಷಕರ ಸಂದರ್ಶನದಲ್ಲಿ ಗುರುತಿಸಲಾದಂತಹ ತೊಡಕುಗಳನ್ನು ನಿವಾರಿಸುವುದು
2. ಕ್ಲಸ್ಟರ್‌ನ ಅಧ್ಯಯನಕ್ಕೆ ಒಳಪಟ್ಟಂತ ಶಿಕ್ಷಕರು ಹಾಗೂ ಯಶಸ್ವಿಯಾಗಿ ಬಹುತರಗತಿ ನಿರ್ವಹಿಸುತ್ತಿರುವ ಶಿಕ್ಷಕರೊಂದಿಗೆ ಸಂವಾದ ಮಾಡುವುದು.
3. ಶಿಕ್ಷಕರಿಗೆ ಅಗತ್ಯ ಸಂಪನ್ಮೂಲ ಬೆಂಬಲವನ್ನು ನೀಡಿ ಮನೋಧೋರಣೆ ಬದಲಾಯಿಸುವುದು.

**ಬಹುವರ್ಗ ಬೋಧನೆ:**

1. ಒಬ್ಬನೇ ಶಿಕ್ಷಕ ಒಂದಕ್ಕಿಂತ ಹೆಚ್ಚು ತರಗತಿ - ಒಂದೇ ಅವಧಿ - ಒಂದೇ ಸ್ಥಳ.
2. ವಿವಿಧ ವಯೋಮಾನದ ವಿವಿಧ ಹಂತಗಳಲ್ಲಿ ಕಲಿಯುವ ಮಕ್ಕಳು
3. ವಿವಿಧ ಪಠ್ಯ ಹಾಗೂ ಸಹಪಠ್ಯ ವಿಷಯಗಳ ಬೋಧನೆ ಮತ್ತು ಕಲಿಕೆ.

**ಕಾರಣಗಳು** :

1. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಪ್ರತಿ 1 ಕಿ.ಮೀ. ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆ ಒದಗಿಸುವುದು.
2. ಕನಿಷ್ಠ 15 ಮಕ್ಕಳಿರುವ ಜನವಸತಿ ಪ್ರದೇಶದಲ್ಲೂ ಶಾಲೆ ತೆರೆಯುವುದು.
3. ತರಗತಿಗೊಬ್ಬ ಶಿಕ್ಷಕರ ನೇಮಕಾತಿಗೆ ಸಾಧ್ಯವಿಲ್ಲದಿರುವುದು.
4. ಕೊಠಡಿ ಹಾಗೂ ಇನ್ನಿತರ ಸೌಲಭ್ಯಗಳ ಕೊರತೆ.
5. ಜನನ ಪ್ರಮಾಣದ ಇಳಿಕೆ - ಶಾಲಾ ದಾಖಲಾತಿಯ ಪ್ರಮಾಣದ ಇಳಿಕೆ.
6. ಶಿಕ್ಷಕರ ದೀರ್ಘಕಾಲಿಕ ರಜೆ.
7. ಶಿಕ್ಷಕರ ಹುದ್ದೆ ಖಾಲಿಯಾದ ತಕ್ಷಣದಲ್ಲಿ ನೇಮಕಾತಿ ಆಗದಿರುವುದು.

**ಸವಾಲುಗಳು** :

1. ಎಲ್ಲಾ ಮಕ್ಕಳನ್ನು ಏಕಕಾಲದಲ್ಲಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು.
2. ಎಲ್ಲಾ ಮಕ್ಕಳಲ್ಲಿ ಗುಣಾತ್ಮಕ ಕಲಿಕೆ ಸಾಧಿಸುವುದು.
3. ಎಲ್ಲಾ ಮಕ್ಕಳಿಗೂ ಪೂರಕವಾಗುವ ಚಟುವಟಿಕೆಗಳನ್ನು ರೂಪಿಸುವುದು.
4. ಎಲ್ಲಾ ಮಕ್ಕಳಲ್ಲೂ ಆಸಕ್ತಿ ಉಳಿಸಿಕೊಳ್ಳುವುದು.
5. ಎಲ್ಲಾ ಮಕ್ಕಳಿಗೂ ಅಗತ್ಯವಾಗುವ ಬೋಧನಾ ಕಲಿಕೋಪರಣಗಳನ್ನು ಸಿದ್ಧಪಡಿಸಿಕೊಳ್ಳುವುದು.
6. ಎಲ್ಲಾ ಮಕ್ಕಳನ್ನೂ  ನಿರಂತರ ಮೌಲ್ಯಮಾಪನಕ್ಕೆ ಒಳಪಡಿಸುವುದು.
7. ಪರಿಹಾರ ಬೋಧನೆ ಕೈಗೊಳ್ಳುವುದು.
8. ನಿಗದಿತ ಪಠ್ಯವಸ್ತುವನ್ನು ನಿಗದಿತ ಸಮಯದಲ್ಲಿ ಪೂರೈಸುವುದು.

**ಒಪ್ಪಿಕೊಳ್ಳುವಿಕೆ** :

1. ಬದಲಾವಣೆ ಅನಿವಾರ್ಯ ಬದಲಾವಣೆ ಜೊತೆಗೆ ಬೆಳವಣಿಗೆ ಕಾಣಬಹುದು.
2. ಶೇ. 100 ಯಶಸ್ಸು ದೊರಕಿಲ್ಲ. ಸಮಸ್ಯೆಗಳಿರುವುದು ನಿಜ.
3. ಈ ಸಮಸ್ಯೆಗಳು ಸಮಸ್ಯೆಗಳಲ್ಲ, ಸವಾಲುಗಳು.
4. ನಮ್ಮ ಮನೋಧರ್ಮದ ಮೇಲೆ ಒಂದು ಶಾಲೆಯ ವ್ಯವಸ್ಥೆ ಇರುತ್ತದೆ. ನಮ್ಮಲ್ಲಿ ಏನೆಲ್ಲಾ ಇದೆ, ಏನೆಲ್ಲಾ ಮಾಡಬಹುದು ಎಂಬ ಧನಾತ್ಮಕ ಚಿಂತನೆ.
5. ಬಹುವರ್ಗ ಬೋಧನೆ ಹೊಸ ಪರಿಕಲ್ಪನೆಯಲ್ಲ. ಹಿಂದಿನಿಂದಲೂ ಇರುವ ವ್ಯವಸ್ಥೆ.
6. ಸಾಧನೆಯು ನಮ್ಮ ಮನೋಧರ್ಮ, ಕೌಶಲಗಳು ಹಾಗೂ ಸ್ವೀಕರಿಸುವಿಕೆಯನ್ನು ಅವಲಂಬಿಸಿದೆ.

7. ಇದು ಅನಿವಾರ್ಯ ಹಾಗೂ ಅಗತ್ಯವೆಂದ ಮೇಲೆ ಆ ಬಗ್ಗೆ ಚಿಂತನೆ ಮಾಡುವುದು, ಯೋಚಿಸುವುದು ಹಾಗೂ ಸಮರ್ಥ ರೀತಿಯಲ್ಲಿ ಅಳವಡಿಸಿಕೊಳ್ಳುವುದು.

**ಮಾರ್ಗೋಪಾಯಗಳು** :

1. ವಿವಿಧ ಯೋಜನೆಗಳನ್ನು ಸೂಕ್ತವಾಗಿ ಅಳವಡಿಸಿಕೊಂಡು ಶಾಲೆಯನ್ನು ಅಭಿವೃದ್ಧಿಪಡಿಸುವುದು.
2. ವಿವಿಧ ತರಬೇತಿಗಳಿಂದ ಹೊಸ ಹೊಸ ಬೋಧನಾ ತಂತ್ರಗಳ ಪರಿಚಯವಾಗುತ್ತಿದ್ದು, ಪ್ರಮಾಣಿಕವಾಗಿ ತರಗತಿ ಕೋಣೆಯಲ್ಲಿ ಅನುಷ್ಠಾನಗೊಳಿಸುವುದು.
3. ವಿವಿಧ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಯೋಜಿಸುವುದು.
4. ನಿರ್ಮಾಣ ಕೌಶಲ ಹೆಚ್ಚಿಸಿಕೊಳ್ಳುವುದು.
5. ಧನಾತ್ಮಕವಾಗಿ ಸ್ವೀಕರಿಸಿ ಕಲಿಕೆಗೆ ಪೂರಕ ಸನ್ನಿವೇಶ ರೂಪಿಸಿಕೊಳ್ಳುವುದು.
6. ವಿಭಿನ್ನ ತಂತ್ರಗಾರಿಕೆಗಳನ್ನು ತಮ್ಮದಾಗಿಸಿಕೊಂಡು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.
7. ಹಿರೇಮ್ಮಣಿಯನ್ನು ಸೂಕ್ತವಾಗಿ ಬಳಸಿಕೊಳ್ಳುವುದು.
8. ಹೆಚ್ಚು ಹೆಚ್ಚು ಕಲಿಕೋಪಕರಣಗಳನ್ನು ಬಳಸಿಕೊಳ್ಳುವುದು.

**ಪ್ರಾಮುಖ್ಯತೆ** :

1. ತರಗತಿಗಳು - ಸಾಮರ್ಥ್ಯಗಳು - ಚಟುವಟಿಕೆಗಳು - ಸಮಯದ ಹೊಂದಾಣಿಕೆ
2. ತರಗತಿ - ಚಟುವಟಿಕೆ - ಸ್ಥಳ - ಗುಂಪು ನಿರ್ವಹಣೆ
3. ಸಾಮ್ಮರ್ಥ್ಯಗಳ ಬೆಳವಣಿಗೆಗಾಗಿ ಅಗತ್ಯ ಚಟುವಟಿಕೆಗಳ ಜೋಡಣೆ
4. ಎಲ್ಲಾ ತರಗತಿಗಳಿಗೂ ಹೆಚ್ಚಿನ ಕಲಿಕಾ ಸಮಯ ಒದಗಿಸುವಿಕೆ
5. ಸಾಮರ್ಥ್ಯಗಳಿಗೆ ಪೂರಕವಾದ ಕಲಿಕೋಪಕರಣಗಳ ಬಳಕೆ
6. ಬಾಹ್ಯ ನೆರವು ಪಡೆಯುವಿಕೆ
7. ನಿರಂತರ ಮೌಲ್ಯ ಮಾಪನ ಮಾಡುವುದು
8. ಪರಿಹಾರ ಬೋಧನೆ

**ಪೂರ್ವ ಸಿದ್ಧತೆ - ಏನನ್ನು ಗಮನಿಸಬೇಕು** ?

1. ನಿರ್ವಹಿಸಬೇಕಾದ ತರಗತಿಗಳು
2. ಸಂಯೋಜಿಸಬೇಕಾದ ತರಗತಿಗಳು
3. ಹೊಂದಾಣಿಕೆಯ ಸಾಮರ್ಥ್ಯಗಳ ಸಮನ್ವಯತೇ
4. ತರಗತಿವಾರು ಮಕ್ಕಳ ಸಂಖ್ಯೆ
5. ಕಲಿಸುವ ವಿಷಯ ಹಾಗೂ ಸಾಮರ್ಥ್ಯಗಳು
6. ಕಲಿಕೆಯ ಹಂತಗಳು

7. ಸೂಕ್ತ ಚಟುವಟಿಕೆಗಳು

8. ಅಗತ್ಯ ಬೋಧನಾ ಸಾಮಗ್ರಿಗಳು

9. ಅಗತ್ಯ ಕಲಿಕಾ ಸಾಮಗ್ರಿಗಳು

10. ಗುಂಪುಗಳ ರಚನೆ - ನಿರ್ವಹಣೆ

11. ಸ್ಥಳ ನಿರ್ವಹಣೆ

12. ಹಿರೇಮಣಿ ಬಳಕೆ

13. ಮೌಲ್ಯಮಾಪನ

14. ಪಾಠದ ಟಿಪ್ಪಣಿ

15. ಬಾಹ್ಯ ನೆರವು

16. ರೇಡಿಯೋ ಪಾಠ ನಿರ್ವಹಣೆ

**ಬೋಧನೆಗೆ ಮುನ್ನ** :

1. ಬೋಧಿಸಬೇಕಾದ ತರಗತಿ, ವಿಷಯ, ವಿಷಯ ವ್ಯಾಪ್ತಿ ಬಗ್ಗೆ ಯೋಚಿಸಿ ಅಗತ್ಯ ಸಿದ್ಧತೆ.
2. ಸಾಮರ್ಥ್ಯಗಳನ್ನು ವಿಶ್ಲೇಷಿಸಿ ಮನದಟ್ಟು ಮಾಡಿಕೊಳ್ಳುವುದು.
3. ಪಾಠ / ಘಟಕದಲ್ಲಿ ಯಾವ ಅಂಶಕ್ಕೆ ಒತ್ತು ನೀಡಬೇಕೆಂಬುದನ್ನು ಗಮನಿಸಬಹುದು.
4. ಸಾಮರ್ಥ್ಯವನ್ನು ಅರ್ಥಮಾಡಿಕೊಂಡು ಲಭ್ಯವಿರುವ ಸಮಯದಲ್ಲಿ ಕಲಿಸಬಹುದಾದ ಕಲಿಕಾಂಶವನ್ನು ಗುರುತಿಸಿಕೊಳ್ಳುವುದು.
5. ನಾಲ್ಕು ಹಂತದ ಚಟುವಟಿಕೆಗಳನ್ನು ಸಾಮರ್ಥ್ಯಕ್ಕನುಗುಣವಾಗಿ ರೂಪಿಸಿಕೊಳ್ಳುವುದು.
6. ಕಲಿಕಾ ಸಾಮಗ್ರಿಗಳು, ತರಗತಿ ನಿರ್ವಹಣೆ, ಚಟುವಟಿಕೆಗಳು ಇತ್ಯಾದಿ ಅಂಶಗಳ ಬಗ್ಗೆ ಯೋಜಿಸಿಕೊಳ್ಳುವುದು.

**ಬೋಧನೆಯಲ್ಲಿ** :

1. ಸ್ಥಳ ಹೊಂದಾಣಿಕೆ
2. ಗುಂಪುಗಳ ರಚನೆ
3. ಕಲಿಕಾ ಸಾಮಗ್ರಿಗಳ ವಿತರಣೆ
4. ಸ್ಪಷ್ಟವಾದ ಸೂಚನೆಗಳನ್ನು ನೀಡುವುದು
5. ಎಲ್ಲಾ ತರಗತಿಯ, ಎಲ್ಲಾ ಮಕ್ಕಳ ಸೂಕ್ತ ಮೇಲ್ವಿಚಾರಣೆ
6. ನೀಡಿದ ಚಟುವಟಿಕೆಗಳ ಪರಿಶೀಲನೆ
7. ಎಲ್ಲಾ ಮಕ್ಕಳನ್ನು ತೊಡಗಿಸಿಕೊಳ್ಳುವುದು.

8. ಸರಳ - ಸ್ಪಷ್ಟ ನಿರೂಪಣೆಯಿಂದ ಮಕ್ಕಳಿಗೆ ಅರ್ಥೈಸುವಿಕೆ.

**ಬೋಧನೆ ನಂತರ**

1. ಮುಂದಿನ ದಿನದ ಚಟುವಟಿಕೆಗಳ ನಿರ್ಧಾರ
2. ಮೌಲ್ಯ ಮಾಪನ ಪ್ರಕ್ರಿಯೆ
3. ಅಪೇಕ್ಷಿತ ಕಲಿಕೆ ಆಗಿಲ್ಲದಿದ್ದಲ್ಲಿ ಚಟುವಟಿಕೆಯ ಪುನರಾವರ್ತನೆ ಅಥವಾ ಹೊಸ ಚಟುವಟಿಕೆಯ ಮೂಲಕ ಬೋಧನೆ / ಕಲಿಕೆ
4. ಮಕ್ಕಳು ಸಾಮರ್ಥ್ಯಗಳಿಸಿದ್ದಲ್ಲಿ ಹೊಸ ಕಲಿಕಾಂಶ ಬೊಧನೆಗೆ ತಯಾರಿ.
5. ಸಾಮರ್ಥ್ಯ ಗಳಿಸದ ಮಕ್ಕಳಿಗೆ ಪರಿಹಾರ ಬೋಧನೆಗೆ ಕ್ರಮ.

**ಯಶಸ್ಸಿನ ಹಾದಿಯಲ್ಲಿ**

1. ಚಟುವಟಿಕೆ ಆಧಾರಿತ ಕಲಿಕೆ
2. ಎಲ್ಲಾ ಮಕ್ಕಳೂ ಪಾಲ್ಗೊಳ್ಳುವುದು.
3. ಪ್ರತಿ ಮಗುವಿನ ಕಲಿಕೆ ಬಗ್ಗೆ ಗಮನ.
4. ಸಂತಸದಾಯಕವಾದ ವಾತಾವರಣ.
5. ಸಾಕಷ್ಟು ಕಲಿಕಾ ಸಾಮಗ್ರಿಗಳ ಸಂಗ್ರಹ ಹಾಗೂ ಬಳಕೆ
6. ವ್ಯವಸ್ಥಿತ ಪಾಠಯೋಜನೆ ಹಾಗೂ ಪಾಠದ ಟಿಪ್ಪಣಿ.
7. ಸಾಕಷ್ಟು ಗುಂಪು ಚಟುವಟಿಕೆಗಳು
8. ಸಾಮರ್ಥ್ಯಗಳ ಹೊಂದಾಣಿಕೆಯಲ್ಲಿ ವಿಷಯದ ಸಮನ್ವಯತೆ
9. ಪರಿಹಾರ ಬೋಧನೆಗೆ ಸೂಕ್ತ ಗಮನ.
10. ವ್ಯವಸ್ಥಿತವಾದ ಸ್ಥಳ ನಿರ್ವಹಣೆ
11. ವಾಚನಾಲಯದ ಬಳಕೆ
12. ಓದುವ ಹವ್ಯಾಸ ಬೆಳೆಸಿಕೊಂಡು ವಿಷಯ ಜ್ಞಾನದ ಸಂಗ್ರಹ.

**ಮಹತ್ವ** :

1. ಕಥೆ, ಹಾಡು, ಸಂಭಾಷಣೆಗಳು, ಒಗಟುಗಳ ಬಳಕೆ.
2. ಮಿಂಚು ಪಟ್ಟಿಗಳ ಬಳಕೆ
3. ಅಕ್ಷರ, ಅಂಕೆಗಳು, ಸಂಖ್ಯೆಗಳು, ಚಿತ್ರಗಳ ಕಾರ್ಡುಗಳ ಬಳಕೆ.
4. ಪ್ರಶ್ನೋತ್ತರ ಕಾರ್ಡುಗಳ ಬಳಕೆ.
5. ಧ್ವನಿ ಸುರುಳಿಗಳ (ಕ್ಯಾಸೆಟ್) ಬಳಕೆ.

6. ಹಾಡು, ನೃತ್ಯ, ನಾಟಕ, ಆಶುಭಾಷಣ, ಆಟ, ವ್ಯಾಯಾಮ, ರಸಪ್ರಶ್ನೆ (ಕ್ವಿಜ್) ಚಿತ್ರ ಬರೆಯುವುದು, ವಸ್ತು ಪ್ರದರ್ಶನ ಇತ್ಯಾದಿ ಸಹಪಠ್ಯ ಚಟುವಟಿಕೆಗಳ ಬಳಕೆ.
7. ಯೋಜನಾ ಕಾರ್ಯ
8. ಕಲಿಕಾ ಚಪ್ಪರ
9. ಪ್ರಕೃತಿ ವೀಕ್ಷಣೆ - ಹೊರಸಂಚಾರ - ಪ್ರವಾಸ.
10. ವಾಲ್ ಪ್ಲೇಟ್ ಬಳಕೆ.
11. ಗ್ರಂಥಾಲಯದ ಬಳಕೆ - ಲೈಬ್ರರಿ ಕಾರ್ಡು

(ಗ್ರಂಥಾಲಯ ಬಳಕೆಯಿಂದ ಭಾಷೆಯಲ್ಲಿನ ಹಲವು ಸಾಮರ್ಥ್ಯಗಳನ್ನು ಕಲಿಸಲು ಸಾಧ್ಯ. ಸರಳ ವಾಕ್ಯಗಳನ್ನು ಓದುವುದು, ಸುಲಲಿತವಾಗಿ ಓದುವುದು, ನಕಲು ಮಾಡುವುದು, ಸರಳ ಪಾಸ ಪದ , ಹಾಡು - ಕಥೆಗಳನ್ನು ಓದಿ ಅರ್ಥಮಾಡಿಕೊಳ್ಳುವುದು. ಸೂಕ್ತ ಲೇಖನ ಬರೆಯವುದು, ಓದಿದ ವಿಷಯವನ್ನು ಅರ್ಥಮಾಡಿಕೊಂಡು ತನ್ನ ಮಾತುಗಳಲ್ಲಿ ಹೇಳುವುದು.)

12. ರಂಗಕಲೆಯ ಚಟುವಟಿಕೆಗಳು : ಶಿಕ್ಷಕರು ಬಹುವರ್ಗ ಬೋಧನೆಯನ್ನು ಸವಾಲಾಗಿ ಸ್ವೀಕರಿಸಿ ತಮ್ಮ ಶಾಲಾ ವಾತಾವರಣಕ್ಕೆ ಪೂರಕವಾದ ಯೋಜನೆ ರೂಪಿಸಿಕೊಂಡು ಹಲವು ತಂತ್ರಗಳನ್ನು ಬಳಸಿಕೊಂಡರೆ ಅಪೇಕ್ಷಿತ ಕಲಿಕೆ ಸಾಧ್ಯ. ಸಕಾರಾತ್ಮಕ ಮನೋಭಾವ ಬೆಳೆಸಿಕೊಂಡರೆ ತನ್ನಂತೆಯೇ ಕಾರ್ಯ ಪ್ರವೃತ್ತರಾಗುತ್ತೇವೆ. ಮಾರ್ಗಗಳನ್ನು ಕಂಡುಕೊಳ್ಳುತ್ತೇವೆ. ಸಂಪೂರ್ಣ ತೊಡಗಿಸಿಕೊಳ್ಳುವಿಕೆ ಬಹಳ ಮುಖ್ಯ.

# ಪರಿವಿಡಿ

## ಮುಖಾಮುಖಿ ಕಾರ್ಯಾಗಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ.

ಸಂಶೋಧನೆ, ಮೌಲ್ಯಮಾಪನ, ಮೇಲುಸ್ತುವಾರಿ, ನಿರ್ವಹಣೆ, ಮೇಲುಸ್ತುವಾರಿ ಮಧ್ಯವರ್ತನದಡಿ ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ಆಯ್ದ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಪ್ರಯೋಗಾತ್ಮಕ ಬಹುತರಗತಿ ನಿರ್ವಹಣಾ ಕೌಶಲಗಳ ಮುಖಾ ಮುಖಿ ಸಂವಾದ

## ವೇಳಾಪಟ್ಟಿ

ವಿಭಾಗ : ಪಿ.ಎಸ್.ಟಿ.ಇ.

ಸ್ಥಳ : ಡಯಟ್, ಶಿವಮೊಗ್ಗ  ದಿನಾಂಕ : 14/04/2007 ರಿಂದ 15/04/2007  ಫಲಾನುಭವಿಗಳು : 30

| | | | | | | | | |
|---|---|---|---|---|---|---|---|---|
| ದಿ | 9.15 | 10.00 ರಿಂದ 11.30 | | 11.45 ರಿಂದ 1.15 | | 2.15 ರಿಂದ 3.45 | | 4.00 ರಿಂದ 5.30 |

| | | | | | | | | |
|---|---|---|---|---|---|---|---|---|
| 14-04-07 | ಶನಿವಾರ | **ತಂಡ ರಚನೆ, ನಾವು ಎಡವಿದ್ದೆಲ್ಲಿ** ? **ಏನು ಸಮಸ್ಯೆ** ? **ಏನು ಕಾರಣ**? (**ಕೆ.ಎಸ್. ಚಿದಂಬರರಾವ್** & **ಇತರರು**) **ವಿಧಾನ** : **ಫೋಕಸ್ಡ್ ಗ್ರೂಪ್ ಡಿಸ್ಕಶನ್** | 11.30 ರಿಂದ 11.45 ಚಹಾ ವಿರಾಮ | ಪರಿಹಾರೋಪಾಯಗಳು. ನಾವು ಮಾಡಿದ್ದೇನು ? (ವೈನ್. ಲಲಿತ & ಇತರರು) ವಿಧಾನ : ಬುದ್ಧಿ ಮಂಥನ | 1.15 ರಿಂದ 2.15 ಊಟದ ವಿರಾಮ | ಹೀಗೊಂದಷ್ಟು ಪ್ರಯತ್ನಗಳು (ಕೆ. ವನಮಾಲ & ಇತರರು) ವಿಧಾನ : ವೀಡಿಯೋ ಪ್ರದರ್ಶನ ಮತ್ತು ಚರ್ಚೆ | 3.45 ರಿಂದ 4.00 ಚಹಾ ವಿರಾಮ | ಏನೆಲ್ಲಾ ಮಾಡಬೇಕು? ಚಟುವಟಿಕೆಗಳ ಚರ್ಚೆ ಶಿಕ್ಷಕರ ಪೂರ್ವ ತಯಾರಿ (ಸಿ.ಆರ್. ಆನಂದಪ್ಪ & ಇತರರು) |
| 15/04/07 | ಭಾನುವಾರ | ಶಾಲಾ ತಂಡದಲ್ಲಿ - ನಾವು ಎಡವಿದ್ದೆಲ್ಲಿ ? ಸಮಸ್ಯೆ / ಪರಿಹಾರಗಳು (ಕೆ. ವನಮಾಲ & ಇತರರು) | | ಶಾಲಾ ಯೋಜನೆ (ವೈನ್. ಲಲಿತ & ಇತರರು) ವಿಧಾನ : ಗುಂಪು ಚರ್ಚೆ | | ಸಾಮರ್ಥ್ಯ ವಿಶ್ಲೇಷಣೆ ಮತ್ತು ಚರ್ಚೆ, ಚಟುವಟಿಕೆಗಳು (ಕೆ.ಎಸ್. ಚಿದಂಬರರಾವ್ & ಇತರರು) | | ಟಿ.ಎಲ್.ಎಮ್. ಮಾದರಿಗಳು ಸಂವಾದ ಮೌಲ್ಯಮಾಪನ. ಅಭಿಪ್ರಾಯಗಳ ವಿನಿಮಯ (ಸಿ.ಆರ್. ಆನಂದಪ್ಪ & ಇತರರು) |
| | | | | | | | | ಮುಂದೆ ಶಾಲೆಯಲ್ಲಿ ನಾವು . --- ಸಂಕಲ್ಪ -- |

**ಸಂಪನ್ಮೂಲ ವ್ಯಕ್ತಿಗಳು**

1. ಕೆ.ಎಸ್. ಚಿದಂಬರರಾವ್
2. ವೈ.ಎನ್. ಲಲಿತ
3. ಸಿ.ಆರ್. ಆನಂದಪ್ಪ

# ಹಂತ – 4

## ಶಿವಮೊಗ್ಗ ತಾ॥ ಚಿಲಕಾದ್ರಿಹಳ್ಳಿ ಕ್ಲಸ್ಟರ್‌ನ ಆಯ್ದ ಸರ್ಕಾರಿ ಶಾಲೆಯ ಭೇಟಿ ಮತ್ತು ಶೈಕ್ಷಣಿಕ ಮಾರ್ಗದರ್ಶನ

ಬಹುತರಗತಿ ನಿರ್ವಹಣಾ ಕೌಶಲಗಳ ಅಧ್ಯಯನ ಅಡಿಯಲ್ಲಿ ನಾಲ್ಕನೇಯ ಹಂತದ ಚಟುವಟಿಕೆಯಾಗಿ ಜೂನ್ ಅವಧಿಯಲ್ಲಿ ಸೇತುಬಂಧ ಚಟುವಟಿಕೆಗಳನ್ನು ವೀಕ್ಷಿಸಿ ಮಾರ್ಗದರ್ಶನ ನೀಡಲು ಆಯೋಜಿಸಲಾಗಿದೆ.

ಜುಲೈ ನಿಂದ ಅಕ್ಟೋಬರ್‌ವರೆಗೆ ಶಾಲೆಗೆ ಜಿಲ್ಲಾ, ತಾಲ್ಲೂಕು, ಕ್ಲಸ್ಟರ್ ಹಂತದ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಿ ಶಾಲೆಯ ಸಮಸ್ಯೆಗಳು, ಶಿಕ್ಷಕರ ಅಗತ್ಯತೆಗಳನ್ನು ಗುರುತಿಸಿ, ಸರಿಪಡಿಸಿ ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಮಾರ್ಗದರ್ಶನ ನೀಡಲು ಯೋಜಿಸಲಾಗಿದೆ.

## ಉದ್ದೇಶಗಳು :

1. ಶಿಕ್ಷಕರ ಯೋಜನೆ ಮತ್ತು ನಿರ್ವಹಣೆಯನ್ನು ಪರಿಶೀಲಿಸುವುದು.
2. ಶಿಕ್ಷಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸುವುದು.
3. ಶಿಕ್ಷಕರ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವುದು.
4. ಮಕ್ಕಳಲ್ಲಿ ಗುಣಮಟ್ಟದ ಕಲಿಕೆಗೆ ಸಂಪನ್ಮೂಲ ಬೆಂಬಲವನ್ನು ಒದಗಿಸುವುದು.

# ಸಂಶೋಧಕರು / ಸಂಪನ್ಮೂಲ ವ್ಯಕ್ತಿಗಳು ಮಾರ್ಗದರ್ಶನ ನೀಡಬೇಕಾದ ಅಂಶಗಳು:

ಬಹುತರಗತಿ ನಿರ್ವಹಣೆಗೆ ಸಂಬಂಧಿಸಿದಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಬೇಕಾದ ಕ್ಷೇತ್ರಗಳು ಈ ಕೆಳಕಂಡಂತಿರುತ್ತವೆ.

## 1. **ಸಾಮರ್ಥ್ಯಗಳ ವಿಶ್ಲೇಷಣೆ** :

1) ಶಿಕ್ಷಕರ ಬಳಿ ಸಾಮರ್ಥ್ಯದ ಪಟ್ಟಿ ಇರುವುದು.
2) ಪೂ.ಸಿ.ಯಲ್ಲಿ ಮಾಡಿಸಬೇಕಾದ ಸಾಮರ್ಥ್ಯದ ಅರಿವು.
3) ಪಾಠವನ್ನು ಹೊರತುಪಡಿಸಿ ಸಾಮರ್ಥ್ಯ ಮೂಡಿಸಲು ಕೈಗೊಳ್ಳಬೇಕಾದ ಚಟುವಟಿಕೆಗಳ ಯೋಜನೆ.
4) ಪೂರಕ ಸಾಹಿತ್ಯ ಶಿಕ್ಷಕರ ಕೈಪಿಡಿ, ಚೈತನ್ಯ, ಸಾಮರ್ಥ್ಯಗಳಿಗನುಗುಣವಾಗಿ ಟಿ.ಎಲ್.ಎಂ.ಗಳ ಆಯ್ಕೆ, ಸಾಮರ್ಥ್ಯಗಳು ನಿರಂತರವಾಗಿ ನಡೆಯುವ ಕ್ರಿಯೆ.

## 2. **ತರಗತಿ ಹೊಂದಾಣಿಕೆ** :

ಸಾಮರ್ಥ್ಯಹೊಂದಾಣಿಕೆ ಆಧರಿಸಿದ ತರಗತಿ ಹೊಂದಾಣಿಕೆ ಹಾಗೂ ಬಹುಮುಖಿ-2 ರಲ್ಲಿ ಸೂಚಿಸಿದಂತೆ ವಿಷಯವಾರು ತರಗತಿ ಹೊಂದಾಣಿಕೆ

1) ತರಗತಿಯಿಂದ ತರಗತಿಗೆ ಸಾಮರ್ಥ್ಯಕಲ್ಲಿರುವ ಸಾಮರಸ್ಯ
2) ವಯೋಮಾನಕ್ಕೆ ತಕ್ಕಂತೆ ಮಕ್ಕಳಲ್ಲಿನ ಪ್ರತಿಕ್ರಿಯೆಗಳು
3) ಅನುಕ್ರಮ ತರಗತಿಗಳ ಹೊಂದಾಣಿಕೆಯ ಅನುಕೂಲಗಳು
4) ಏಕರೂಪದ ಚಟುವಟಿಕೆಗಳನ್ನು ಮಾಡಿಸಲು ಅವಕಾಶ
5) ಮೇಲಿನವರಿಗೆ ಆ ಚಟುವಟಿಕೆ ಪುನರ್ಬಲನವಾದರೆ ಕೆಳಗಿನವರಿಗೆ ಪೂ.ಸಿ.
6) ಕಲಿಕಾ ಸಮಯದ ಹೆಚ್ಚು ಹೆಚ್ಚು ಬಳಕೆ.

## 3. **ಸಾಮರ್ಥ್ಯ ಹೊಂದಾಣಿಕೆ** :

1) ಸಾಮರ್ಥ್ಯಗಳ ಸಾಮ್ಯತೆ ಮತ್ತು ಭಿನ್ನತೆಯ ಅರಿವಿರಬೇಕು
2) ಹೊಂದಾಣಿಕೆಗೆ ಇರುವ ಅವಕಾಶ
3) ಸಾಮರ್ಥ್ಯಕ್ಕನುಗುಣವಾದ ಚಟುವಟಿಕೆಗಳನ್ನು ಪಟ್ಟಿ ಮಾಡಿಟ್ಟುಕೊಳ್ಳುವುದು
4) ಸಾಮರ್ಥ್ಯಗಳ ಹೊಂದಾಣಿಕೆಯ ಮಿತಿಯನ್ನು ಗುರುತಿಸುವುದು.

## 4. **ಯೋಜನೆ** :

1) ಸಾಮರ್ಥ್ಯ /ಪಾಠದ ಆಯ್ಕೆ,
2) ಪಾಠದ ಟಿಪ್ಪಣಿ
3) ಸಮಯ ಹಂಚಿಕೆ

4) ಚಟುವಟಿಕೆಯ ಹಂತಗಳ ಬಗ್ಗೆ ಯೋಜನೆ

5) ಟಿ.ಎಲ್.ಎಂ./ಎಸ್.ಎಲ್.ಎಂ.

6) ಚಟುವಟಿಕೆಗಳು.

## 5. ಸಮಯ ಹೊಂದಾಣಿಕೆ :

1) ಚಟುವಟಿವಾರು ಸಮಯದ ಹಂಚಿಕೆ

2) ತರಗತಿವಾರು ಕಲಿಕಾ ಹಂತಗಳ ಹಂಚಿಕೆ

3) ರೇಡಿಯೋ ಪಾಠಕ್ಕೆ ಅವಕಾಶ.

## 6. ಚಟುವಟಿಕೆಗಳ ಆಯ್ಕೆ:

1) ಕಲಿಕಾಂಕಕ್ಕೆ / ಸಾಮರ್ಥ್ಯಕ್ಕೆ ಪೂರಕವಾಗಿರಬೇಕು

2) ಮಕ್ಕಳು ಸುಲಭವಾಗಿ ಅರ್ಥ ಮಾಡಿಕೊಳ್ಳುವ ಹಾಗು ಬಳಸುವಂತಿರಬೇಕು

3) ಚಟುವಟಿಕೆ ಆಸಕ್ತಿದಾಯಕವಾಗಿರಬೇಕು

4) 1ಕ್ಕಿಂತ ಹೆಚ್ಚು ಉದ್ದೇಶಗಳಿಗೆ ಪೂರಕವಾಗುವ ಚಟುವಟಿಕೆಯಾಗಿರಬೇಕು

5) ನಿತ್ಯ ಜೀವನದ ಘಟನೆಗಳಿಗೆ ಸಂಬಂಧಿಸಿರಬೇಕು

6) ಪರಿಸರದ ಬಳಕೆ, ವ್ಯವಹಾರದ ಬಳಕೆ

7) ಪ್ರವಾಸ, ಹೊರಸಂಚಾರ ಪ್ರಯೋಗಗಳು

## 7. ಬೋಧನಾ/ಕಲಿಕೋಪಕರಣಗಳು (ಟಿ.ಎಲ್.ಎಂ./ಎಸ್.ಎಲ್.ಎಂ.)

1) ಕಸದಿಂದ ಕಸ

2) ಕಡಿಮೆ ದರ

3) ಸಾಮರ್ಥ್ಯಕ್ಕೆ ಪೂರಕ

4) ಮಕ್ಕಳ ಆಸಕ್ತಿ ಕೆರಳಿಸುವುದು

5) ಮಕ್ಕಳು ಸ್ವತಃ ಬಳಸುವುದು

6) ಟಿ.ಎಲ್.ಎಂ./ಎಸ್.ಎಲ್.ಎಂ.ಗಿರುವ ವ್ಯತ್ಯಾಸ

## 8. ಹಿರೇಮಣಿ ಬಳಕೆ ಮತ್ತು ಆಯ್ಕೆ :

1) ಎಲ್ಲರಿಗೂ ಅವಕಾಶ

2) ಗುಂಪು ರಚನೆ

3) ಅದೇ ತರಗತಿ ಮಕ್ಕಳು

## ೯. ಸ್ವಯಂ ಕಲಿಕೆ :

1) ವೈಯಕ್ತಿಕ ಅಭ್ಯಾಸಗಳಿಗೆ ಹೆಚ್ಚು ಒತ್ತು
2) ಪೂರಕವಾದ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

## ಸೇತುಬಂಧ :

ಜೂನ್ ಅವಧಿಯಲ್ಲಿ ಸೇತುಬಂಧ ಹಾಗೂ ದಾಖಲೀಕರಣ ನಿರ್ವಹಣೆ ಮಕ್ಕಳ ಕಲಿಕಾ ಸಮಯ ಸದುಪಯೋಗಪಡಿಸುವಂತೆ ಆಯೋಜಿಸಿರಬೇಕು.

## ಸೇತುಬಂಧಕ್ಕೆ ಶಿಕ್ಷಕರ ಪೂರ್ವಸಿದ್ಧತೆ

ತರಗತಿವಾರು/ ವಿಷಯವಾರು ಸೇತುಬಂಧ ಚಟುವಟಿಕೆಗಾಗಿ ಗುರುತಿಸಿದ ಆಯ್ದುಕೊಂಡ ಸಾಮರ್ಥ್ಯಗಳು / ಕಲಿಕಾಂಶಗಳು ಮಕ್ಕಳ ಕಲಿಕಾ ನ್ಯೂನತೆಗಳನ್ನು ಗುರುತಿಸಲು ಹಿಂದಿನ ತರಗತಿಯ ಕೆಲವು ಆಯ್ದ ಕಲಿಕಾಂಶ / ಸಾಮರ್ಥ್ಯಗಳನ್ನು ಗುರುತಿಸಿಕೊಂಡು ಅದರಲ್ಲಿ ನೈದಾನಿಕ ಪರೀಕ್ಷೆಗೆ ಪ್ರಶ್ನೆಯನ್ನಾಗಿ ಮಾರ್ಪಡಿಸಬೇಕು. ನೈದಾನಿಕ ಪರೀಕ್ಷೆಯಲ್ಲಿ ಮಕ್ಕಳ ಕಲಿಕಾ ಮಟ್ಟವನ್ನಾಧರಿಸಿ ಪರಿಹಾರ ಬೋಧನೆ ಹಾಗೂ ಕಲಿಕೆಯಲ್ಲಿ ಮುಂದಿರುವ ಮಕ್ಕಳಿಗೆ, ಸಂಪನ್ಮೂಲ ಕಾರ್ಯಕ್ರಮಕ್ಕೆ ಯೋಜನೆ ರೂಪಿಸಬೇಕು. ಸೇತುಬಂಧದಿಂದ ಸಾಮರ್ಥ್ಯಗಳನ್ನು ಕಲಿಸುವಿಕೆಗೆ ಚಾಲನೆ ನೀಡಬೇಕು.

ಸಹಿ

**ಜಿಲ್ಲಾ / ತಾಲ್ಲೂಕು ಹಂತದ ಅಧಿಕಾರಿಗಳು ಭೇಟಿ ನೀಡಿ ವೀಕ್ಷಿಸಿ ಮಾರ್ಗದರ್ಶಿಸಬೇಕಾದ ಅಂಶಗಳು :**

1. ಶಾಲೆಯ ಹೆಸರು

2. ಮುಖ್ಯ ಶಿಕ್ಷಕರ ಹೆಸರು ಮತ್ತು
   ಹಾಲಿ ಸಹಶಿಕ್ಷಕರ ಸಂಖ್ಯೆ.

3. ಶಾಲೆಯ ಶಿಕ್ಷಕರು ಪಡೆದ ತರಬೇತಿ ವಿವರ :

| ಕ್ರ.ಸಂ. | ಶಿಕ್ಷಕರ ಹೆಸರು | ಪಡೆದ ತರಬೇತಿಗಳು | ತರಗತಿಯಲ್ಲಿ ಅನುಷ್ಟಾನಕ್ಕೆ ಸಿದ್ಧತೆ | ಸಂದರ್ಶಕರ ಅಭಿಪ್ರಾಯ |
|---|---|---|---|---|
| | | | | |

4. ಶಾಲಾ ಶೈಕ್ಷಣಿಕ ಯೋಜನೆ ಅಥವ ಶಾಲಾ ಪಂಚಾಂಗ

5. ವೇಳಾಪಟ್ಟಿ ಇದೆಯೇ ?

6. ಶಿಕ್ಷಕರ ವೈಯಕ್ತಿಕ ಯೋಜನೆ ವಿಷಯವಾರು

7. ಶಿಕ್ಷಕರ ಪೂರ್ವ ತಯಾರಿ :

8. ಪಾಠ ಟಿಪ್ಪಣಿಯನ್ನು ವೀಕ್ಷಿಸಿ ಭರ್ತಿ ಮಾಡಬೇಕು.
   ಬೋಧನೋಪಕರಣ

   ಕಲಿಕೋಪಕರಣ

   ಪೂರಕ ಸಾಮಗ್ರಿಗಳು

   ಚಟುವಟಿಕೆಗಳು

   ಮೌಲ್ಯಮಾಪನ

9. ಪ್ರಗತಿ ತಃಖ್ತೆ

10. ಪರಿಹಾರ ಬೋಧನೆ ತಃಖ್ತೆ

ಪ.ಬೋ. ಇರುವ ಮಕ್ಕಳ ಸಂಖ್ಯೆ :

ಪ.ಬೋ. ಗೆ ಅಳವಡಿಸಿಕೊಂಡ ವಿಧಾನ.

11. ಶಾಲಾ ವಾತಾವರಣ ಕಲಿಕೆಗೆ ಪೂರಕವೇ ?

ಅ) ಶಾಲಾ ಪರಿಸರ

ಆ) ತರಗತಿ ಕೊಠಡಿ

12. ಪಾಠ ಅವಲೋಕನದಿಂದ ಗುರುತಿಸುವುದು.

**ತರಗತಿ ನಿರ್ವಹಣೆ** :

ಸಾಮರ್ಥ್ಯಗಳ / ಕಲಿಕಾಂಶಗಳ ಪರಿಕಲ್ಪನೆ.

ಸಮಯ ಹಂಚಿಕೆ ಟಿ.ಎಲ್.ಎಂ. ಬಳಕೆ

ಕಲಿಕಾ ಹಂತವನ್ನಾಧರಿಸಿದ ಚಟುವಟಿಕೆಗಳು

ಚಟುವಟಿಕೆಗಳ ನಿರ್ವಹಣೆ

ಹಿರೇಮಣಿ ಬಳಕೆ

ಸ್ಥಳ ನಿರ್ವಹಣೆ

ಗುಂಪು ನಿರ್ವಹಣೆ

ಮೌಲ್ಯಮಾಪನ

ತರಗತಿ ಕಲಿಕೆ ಪರಿಣಾಮಕಾರಿಯಾಗಿತ್ತೆ.

13. ಶಾಲೆ ಯಲ್ಲಿ ಗುರುತಿಸಿದ ಉತ್ತಮ ಅಂಶಗಳು

14. ಶಿಕ್ಷಕರಲ್ಲಿ ಗುರುತಿಸಿದ ಉತ್ತಮ ಅಂಶಗಳು

15. ಶಾಲೆ ಯಲ್ಲಿ ಗುರುತಿಸಿದ ತೊಡಕುಗಳು.

16. ಶಿಕ್ಷಕರಲ್ಲಿ ಗುರುತಿಸಿದ ತೊಡಕುಗಳು.

17. ಶಾಲೆ ಯ ಸುಧಾರಣೆಗೆ ಸಲಹೆಗಳು.

18. ಶಿಕ್ಷಕರಿಗೆ ಸುಧಾರಣೆಗೆ ಸಲಹೆಗಳು.

ಶಾಲೆಯ ಬಗ್ಗೆ ಒಟ್ಟಾರೆ ಅಭಿಪ್ರಾಯ :

ಸಹಿ

ಸಿ.ಆರ್.ಪಿ.

## ಶಾಲೆ ಮಾಹಿತಿ ಪ್ರಾರಂಭದಲ್ಲಿ.

1. ಶಾಲೆಯ ಹೆಸರು

2. ಮುಖ್ಯ ಶಿಕ್ಷಕರ ಹೆಸರು : ಸಹ ಶಿಕ್ಷಕರ ಸಂಖ್ಯೆ :

3. ಮಕ್ಕಳ ಸಂಖ್ಯೆ : ತರಗತಿವಾರು

4. ಶಿಕ್ಷಕರು ಪಡೆದ ತರಬೇತಿ ವಿವರ :

| ಕ್ರ.ಸಂ. | ಶಿಕ್ಷಕರ ಹೆಸರು | ಪಡೆದ ತರಬೇತಿಗಳು | ತರಬೇತಿ ಅನುಷ್ಠಾನಕ್ಕೆ ಸಿದ್ಧತೆ | ತರಗತಿ ನಿರ್ವಹಣೆಯಲ್ಲಿ ಬಳಕೆ |
|---|---|---|---|---|
| | | | | |

5. ಶಾಲಾ ವಾರ್ಷಿಕ ಶೈಕ್ಷಣಿಕ ಯೋಜನೆ ಅದರಲ್ಲಿ ಶೈ.ಕಾರ್ಯಕ್ರಮಗಳಿವೆಯೆ ?

6. ಶಾಲಾ ವೇಳಾಪಟ್ಟಿ ಸೂಕ್ತವಾಗಿ ಆಯೋಜಿಸಲಾಗಿದೆಯೇ ?

7. ಶಿಕ್ಷಕರ ವೈಯಕ್ತಿಕ ವಿಷಯವಾರು ಶೈಕ್ಷಣಿಕ ಯೋಜನೆ

8. ವಾರ್ಷಿಕ ಸಾಮರ್ಥ್ಯ ಪಟ್ಟಿ

9. ಇದ್ದರೆ ಸಾಮರ್ಥ್ಯಗಳ ಪರಿಕಲ್ಪನೆ ಶಿಕ್ಷಕರಿಗೆ

10. ಪರಿಹಾರ ಬೋಧನೆ ತಃಖ್ತೆ :

11. ಕಲಿಕೆಯಲ್ಲಿ ಮಕ್ಕಳನ್ನು ವಿಷಯ ಸಾಮರ್ಥ್ಯವಾರು ಗುರುತಿಸಲಾಗಿದೆಯೇ ?

12. ಗುರುತಿಸಿದ ಮಕ್ಕಳಿಗೆ ಸೂಕ್ತ ಪ.ಬೋ. ಕಾರ್ಯತಂತ್ರ ರೂಪಿಸಿದ್ದಾರೆಯೇ ?

13. ಕಾರ್ಯತಂತ್ರಗಳನ್ನು ತ. ಕೋಣೆಯಲ್ಲಿ ಅನುಷ್ಠಾನವಾಗಿದೆಯೆ ? ಹೌದಾದಲ್ಲಿ ಕಾರ್ಯತಂತ್ರಗಳನ್ನು ನಮೂದಿಸಿ

## ಶೈಕ್ಷಣಿಕ ಪ್ರಗತಿ ಪರಿಶೀಲನೆ :

1. ಶಿಕ್ಷಕರ ತರಗತಿ ಪೂರ್ವ ಸಿದ್ಧತೆ (ಪಾಠ ಟಿಪ್ಪಣಿಯನ್ನು ಗಮನಿಸಿ ನಮೂದಿಸುವುದು.)

2. ಸಾಮರ್ಥ್ಯ / ಕಲಿಕಾಂಶಗಳ ಪರಿಕಲ್ಪನೆ :

3. ಕಲಿಕಾ ಸಾಮಗ್ರಿಗಳ ಆಯ್ಕೆ :

4. ಕಲಿಕಾ ಸಾಮಗ್ರಿ ತಯಾರಿಕೆ :

5. ಬೋಧನೋಪಕರಣ ಸಂಖ್ಯೆ :

6. ಕಲಿಕೋಪಕರಣಗಳ ಸಂಖ್ಯೆ :

7. ಚಟುವಟಿಕೆಗಳು ಹಂ ತವಾರು :

8. ಸಾಮರ್ಥ್ಯ ಆಧಾರಿತ ಮೌಲ್ಯಮಾಪನ ಪರಿಕಲ್ಪನೆ :

9. ಇತರೆ ಪೂರಕ ಸಾಮಗ್ರಿ ಮತ್ತು ಚಟುವಟಿಕೆಗಳು :

## ಪಾಠ ಅವಲೋಕನ

1. ತರಗತಿ ಕೊಠಡಿ ಕಲಿಕೆಗೆ ಪೂರಕವಾಗಿದೆ :
2. ವಿಷಯ ____________________ ಸಾಮರ್ಥ್ಯ ಹೊಂದಾಣಿಕೆ / ಹೊಂದಾಣಿಕೆಯಾಗದ ಪಾಠ ಯೋಜನೆ
3. ತರಗತಿ ಹೊಂದಾಣಿಕೆ
4. ಇತರೆ ತರಗತಿಗೆ ನೀಡಿದ ಪೂರಕ ಚಟುವಟಿಕೆ ಸಾಮರ್ಥ್ಯಕ್ಕೆ ಸಮಂಜಸವೇ ?
5. ಇತರೆ ತರಗತಿಗೆ ನಿರ್ವಹಣೆಗೆ ಶಿಕ್ಷಕ ಬಳಸಿದ ವಿಧಾನ
6. ಇತರೆ ತರಗತಿ ನಿರ್ವಹಣೆಗೆ ಕಲಿಕೋಪಕರಣಗಳನ್ನು ಬಳಸಲಾಗಿತ್ತೇ ?
7. ಹೌದಾದಲ್ಲಿ ಅವು ಹೆಚ್ಚುವರಿ ಕಲಿಕೆಗೆ ಸಹಾಯಕವಾಗಿದ್ದವೇ ?
8. ನೇರ ಕಲಿಕೆಗೆ ಅಳವಡಿಸಿಕೊಂಡ ತರಗತಿಯ ನಿರ್ವಹಣೆ.
9. ಶಿಕ್ಷಕರು ಬೋಧನೋಪಕರಣಗಳನ್ನು ಬಳಸಿದರೇ ?
10. ಹೌದಾದಲ್ಲಿ ಅವು ಸಾಮರ್ಥ್ಯಗಳಿಗೆ ಸಮಂಜಸವಾಗಿದ್ದವೇ ?
11. ಸ್ಥಳ ನಿರ್ವಹಣೆ ಸೂಕ್ತವಾಗಿತ್ತೇ ?
12. ಕಲಿಕೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ತೊಡಗಿಸಿ ಕೊಂಡಿದ್ದರೇ ?
13. ಸಮಯ ಹಂಚಿಕೆ ಸಮರ್ಪಕವಾಗಿತ್ತೇ ?
14. ಅವಲೋಕಿಸಿದ ತರಗತಿಯಲ್ಲಿ ಕಲಿಕೆ ಪರಿಣಾಮಕಾರಿಯಾಗಿತ್ತೇ ? ಅವಲೋಕಿಸಿದವರ ಅಭಿಪ್ರಾಯ.

## ಮಾರ್ಗದರ್ಶನ

ತರಬೇತಿ ಅನುಪಾಲನೆ

ಗುರುತಿನ ತೊಡಕುಗಳು:

ನೀಡಿದ ಸಲಹೆಗಳು

ಉತ್ತಮಾಂಶಗಳು:

## ಸಮಾಲೋಚನಾ ಸಭೆ

ಸಮಾಲೋಚನಾ ಸಭೆಯಲ್ಲಿ ಶಿಕ್ಷಕರ ತರಗತಿ ಬೋಧನಾ ಸಮಸ್ಯೆಗಳ ಚರ್ಚೆಯಾಗಿದೆಯೇ ?
ಚರ್ಚಿಸಿದ್ದರೆ ಯಾವ ಅಂಶಗಳನ್ನು ಚರ್ಚಿಸಲಾಗಿದೆ ?

ಕಂಡುಕೊಂಡ ಪರಿಹಾರಗಳೇನು ?

ಸಹಿ

## ಶಾಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಗಮನಿಸುವ ಚೆಕ್‌ಲಿಸ್ಟ್ :

1. **ಶಾಲೆಯ ಹೆಸರು** :
2. **ಶಾಲಾ ವಾರ್ಷಿಕ ಶೈಕ್ಷಣಿಕ** ಯೋಜನೆ — ಇದೆ / ಇಲ್ಲ
3. ಶಿಕ್ಷಕರ ವೈಯಕ್ತಿಕ ವಿಷಯವಾರು ಶೈಕ್ಷಣಿಕ ಯೋಜನೆ — ಇದೆ / ಇಲ್ಲ
4. ರೇಡಿಯೋ ಕಾರ್ಯಕ್ರಮ ನಿರ್ವಹಣೆ :
   ಕೇಳಿಕಲಿ / ಚುಕ್ಕಿ ಚಿನ್ನ / ಚಿನ್ನರ ಚುಕ್ಕಿ / ಬಾನ್ದನಿ — ಇದೆ/ ಇಲ್ಲ
5. ವಾರ್ಷಿಕ ಸಾಮರ್ಥ್ಯ ಪಟ್ಟಿ — ಇದೆ / ಇಲ್ಲ
6. ವೇಳಾಪಟ್ಟಿ — ಇದೆ / ಇಲ್ಲ
7. ತರಬೇತಿ ಅನುಷ್ಠಾನಕ್ಕೆ ಶಿಕ್ಷಕರ ಸಿದ್ದತೆ ದಾಖಲೆ / ಮೌಖಿಕ ಮಾಹಿತಿ — ಇದೆ / ಇಲ್ಲ
8. ಕಲಿಕಾ ಸಾಮಗ್ರಿಗಳು / ಕಲಿಕಾ ಕಾರ್ನರ್ — ಇದೆ / ಇಲ್ಲ
9. ಗ್ರಂಥಾಲಯ ವ್ಯವಸ್ಥಿತ ಬಳಕೆ — ಇದೆ / ಭಾಗಶಃ ಬಳಕೆ / ಇಲ್ಲ
10. ವಿದ್ಯಾರ್ಥಿ ಸಂಘಟನೆ — ಇದೆ/ಇಲ್ಲ
11. ಪ್ರತಿಭಾ ಕಾರಂಜಿಯಲ್ಲಿ ಶಾಲಾ ಪ್ರಾತಿನಿಧಿತ್ವ — ಉತ್ತಮ / ಸಾಧಾರಣ / ಸುಧಾರಿಸಬೇಕು
12. ಕ್ರೀಡಾ ಚಟುವಟಿಕೆಗಳಲ್ಲಿ ಶಾಲಾ ಪ್ರಾತಿನಿಧಿತ್ವ — ಉತ್ತಮ /ಸಾಧಾರಣ / ಸುಧಾರಿಸಬೇಕು
13. ಅಕ್ಷರ ದಾಸೋಹ ನಿರ್ವಹಣೆಗೆ ಶಿಕ್ಷಕರ ಸಹಭಾಗಿತ್ವ — ಭಾಗಶಃ / ಸಂಪೂರ್ಣ / ಇಲ್ಲ

| | | |
|---|---|---|
| 14. | ಶಾಲಾ ಕೈತೋಟ | ಇದೆ / ಇಲ್ಲ |
| 15. | ಶಿಕ್ಷಕರು ಮಾಡಿರುವ ಸಂಶೋಧನೆಗಳು | ಇವೆ / ಇಲ್ಲ |
| 16. | ಸಮನ್ವಯ ಶಿಕ್ಷಣದಡಿಯಲ್ಲಿ ಮಕ್ಕಳನ್ನು ಗುರುತಿಸುವಿಕೆ. | ಆಗಿದೆ / ಆಗಿಲ್ಲ |
| 17. | ಸರ್ಕಾರಿ ಸವಲತ್ತು ಬಗ್ಗೆ ಮಾರ್ಗದರ್ಶನ | ನೀಡಿದ್ದಾರೆ / ಇಲ್ಲ |
| 18. | ತರಗತಿ ಬೋಧನೆಗೆ ಕಾರ್ಯತಂತ್ರ ರೂಪಿಸಿರುವಿಕೆ | ಇದೆ / ಇಲ್ಲ |
| 19. | ಪಾಠ ಟಿಪ್ಪಣಿ ಶಿಕ್ಷಕವಾರು | ಇದೆ / ಇಲ್ಲ |
| 20. | ಮೌಲ್ಯಮಾಪನ ವಿಧಾನ ಆಯ್ಕೆ ಸಮರ್ಪಕವಾಗಿದೆ | ಇದೆ / ಇಲ್ಲ |
| 21. | ತರಗತಿ ನಿರ್ವಹಣೆಯಿಂದ ಗುರುತಿಸಬೇಕು. | ಉತ್ತಮ / ಸಾಧಾರಣ / ಅತ್ಯುತ್ತಮ |
| 22. | ಪರಿಹಾರ ಬೋಧನೆ ತಃಖ್ತೆ | ಇದೆ / ಇಲ್ಲ |
| 23. | ಗುರುತಿಸಿದ ಮಕ್ಕಳಿಗೆ ಕಾರ್ಯತಂತ್ರ ರೂಪಿಸಿ ಬೋಧನೆ | ಇದೆ/ ಇಲ್ಲ |
| 24. | ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆ | ಸಾಪ್ತಾಹಿಕ / ಮಾಸಿಕ / ದ್ವೈಮಾಸಿಕ |
| 25. | ಪ್ರಗತಿ ತಃಖ್ತೆ | ಇದೆ / ಇಲ್ಲ |

ಶಾಲೆಯ ಬಗ್ಗೆ ಸಂದರ್ಶಿಸಿದವರ ಒಟ್ಟಾಭಿಪ್ರಾಯ.

ಸಹಿ